ವಿಜಯಪುರ | ಸಂಪುಟ 01 | ಸಂಚಿಕೆ 289 | ಪುಟ 4 | ₹ 3.00

https://udayarashminews.com udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶುಕ್ರವಾರ, ಜನವರಿ 12, 2024



“ಜ.26ರಂದು ಹೊಸದಿಲ್ಲಿಯಲ್ಲಿ ನಡೆಯಲಿರುವ ಗಣ-ರಾಜ್ಯೋತ್ಸವದ ಪಥ ಸಂಚಲನದಲ್ಲಿ ರಾಜ್ಯದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ನಿರಾಕರಣೆ ಮಾಡುವ ಮೂಲಕ ಕೇಂದ್ರ ಸರ್ಕಾರ, ನಾಡಿನ ಏಳು ಕೋಟಿ ಕನ್ನಡಿಗರಿಗೆ ಅಪಮಾನ ಮಾಡಿದೆ.”

– ಸಿದ್ದರಾಮಯ್ಯ
ಮುಖ್ಯಮಂತ್ರಿಗಳು, ಕರ್ನಾಟಕ

### ಸಕಾಲ’ ಪ್ರಗತಿ ಪರಿಶೀಲನಾ ಸಭೆ । ಸಕಾಲ ಸೇವೆಯನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಲು ಸೂಚನೆ

# ಜನರ ಮನೆ ಬಾಗಿಲಿಗೆ ಸರ್ಕಾರಿ ಸೇವೆ :ಕೃಷ್ಣ ಬೈರೇಗೌಡ



ಬೆಂಗಳೂರು: ‘ಸಕಾಲ’ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಸರ್ಕಾರಿ ಸೇವೆಗಳನ್ನು ಅಧಿಕಾರಿಗಳು ವಿಳಂಬವಿಲ್ಲದೆ ಜನರ ಮನೆ ಬಾಗಿಲಿಗೆ ತಲುಪಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ವಿಧಾನಸೌಧದಲ್ಲಿ ಗುರುವಾರ ನಡೆದ “ಸಕಾಲ ಪ್ರಗತಿ ಪರಿಶೀಲನಾ ಸಭೆ”ಯಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, “ಸರ್ಕಾರ ಪ್ರತಿಯೊಬ್ಬರ ಮನೆ ಬಾಗಿಲಿಗೆ ತಲುಪಲು ಇರುವ ಏಕೈಕ ಮಾರ್ಗ ಸಕಾಲ. ಈ ಯೋಜನೆಯನ್ನು ಪರಿಣಾಮಕಾ-ರಿಯಾಗಿ ಜಾರಿಗೆ ತರಬೇಕು, ಜನರಿಗೆ ವಿಳಂಬವಿಲ್ಲದೆ ಎಲ್ಲಾ ಸೇವೆಗಳೂ ಲಭ್ಯವಾಗುವಂತಿರಬೇಕು ಎಂಬುದೇ ಸರ್ಕಾರ ಉದ್ದೇಶ. ಆದರೆ, ಕೆಲವು ಸೇವೆಗಳು ವಿಳಂಬವಾಗುತ್ತಿರುವುದು ಸರಿಯಲ್ಲ” ಎಂದು ಎಚ್ಚರಿಕೆ ನೀಡಿದರು.

ವ್ಯಂದವರ್ದ್ಯ, “ಸಕಾಲ ಸೇವೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಆದ-ರೆ, ಸುಧಾರಣೆಯಾಗಬೇಕಾದ್ದು ಇನ್ನೂ ಬಹಳಷ್ಟಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಕಾಲ ಸೇವೆ ವಿಳಂಬವಾಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ನಮಗೆ ವರ ಕೊಟ್ಟು ಇಲ್ಲಿ ಕೂ-ರಿಸಿದವರನ್ನೇ ಮನೆಯ ಹೊರಗೆ ಕೂರಿಸಿ ಸತಾಯಿಸುವ ಕೆಲಸ ಆಗಬಾರದು. ಸಕಾಲ ಸೇವೆಯನ್ನು ಅಧಿಕಾರಿಗಳು ನಾಮಕಾವಸ್ತೆಯಂತೆ ಹಗುರವಾಗಿ ತೆಗೆದುಕೊಳ್ಳಬಾರದು” ಎಂದು ಕಿವಿಮಾತು ಹೇಳಿದರು.

ಸರ್ಕಾರಿ ಸೇವೆ ಒದಗಿಸುವುದು ನಮ್ಮ ಕರ್ತವ್ಯ, ಸೇವೆಯನ್ನು ಪಡೆಯುವುದು ಜನರ ಮೂಲಭೂತ ಹಕ್ಕು. ಹೀಗಾಗಿ ಅಧಿಕಾರಿಗಳು ಸಕಾಲ ಸೇವೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಜನರ ಮನೆ ಬಾಗಿಲಿಗೆ ಸರ್ಕಾರವನ್ನು ತಲುಪಿಸಬೇಕು. ಸರ್ಕಾರದ ಜೊತೆ ಕೈಜೋಡಿಸಿ ಜನರಿಗೆ ಉತ್ತಮ ಸೇವೆ ನೀಡಲು ಮುಂದಾಗಬೇಕು” ಎಂದು ಅವರು ಕಿವಿಮಾತು ಹೇಳಿದರು.

**‘ಸಕಾಲ’ ಸೇವೆಯೂ ಡಿಜಿಟಲ್**

ಸಭೆಯಲ್ಲಿ ಸಕಾಲ ಸೇವೆಯನ್ನೂ ಡಿಜಿಟಲೀಕರಣಗೊಳಿಸುವ ಬಗ್ಗೆಯೂ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಂದಾಯ ಇಲಾಖೆಯಲ್ಲಿ ಈಗಾಗಲೇ ಎಲ್ಲಾ ಸೇವೆಯನ್ನೂ ಆನ್‌ಲೈನ್ ಮೂಲಕವೇ ನೀಡಲಾಗುತ್ತಿದೆ. ಸಕಾಲ ಸೇವೆಯನ್ನೂ ಏಕೆ ಆನ್‌ಲೈನ್ ಮೂಲಕ ನೀಡಬಾರದು? ಎಂದು ಪ್ರಶ್ನಿಸಿದ ಸಚಿವರು, ಸಮಾಜದಲ್ಲಿ ಡಿಜಿಟಲ್ ಸಾಕ್ಷರತೆ ಹೆಚ್ಚುತ್ತಿದೆ. ಹೀಗಾಗಿ ಆನ್ಲೈನ್ ಸೇವೆ ಜನರಿಗೆ ಸಮಸ್ಯೆ ಆಗುತ್ತಿದೆ ಎಂಬುದು ಸುಳ್ಳು ಹೇಳಿಕೆ. ಕಂದಾಯ ಇಲಾಖೆಯಲ್ಲೇ ಇದು ಸಾಧ್ಯವಾಗಿದೆ ಎಂದ ಮೇಲೆ ಉಳಿದ ಕಡೆ ಏಕೆ ಸಾಧ್ಯವಿಲ್ಲ. ಇನ್ಮುಂದೆ ಸಕಾಲ ಅರ್ಜಿಯನ್ನೂ ಆನ್‌ಲೈನ್ ಮೂಲಕವೇ ಸ್ವೀಕರಿಸಿ ಎಂದು ಸಲಹೆ ನೀಡಿದರು.

“ಪ್ರತಿ ಹಳ್ಳಿಯಲ್ಲೂ ಈಗ ಸೈಬರ್ ತಾಣಗಳಿವೆ. ಸರ್ಕಾರದ ಗ್ರಾಮ–1 ಸೇವೆಯನ್ನು ಮತ್ತಷ್ಟು ವಿಸ್ತರಿಸುವ ಮತ್ತು ಮೊಬೈಲ್‌ಗೂ ನೀಡುವ ಉದ್ದೇಶ ಸರ್ಕಾರಕ್ಕಿದೆ. ಇದು ಸಾಧ್ಯವಾದರೆ ಜನ ಮೊಬೈಲ್ ಮೂಲಕವೇ ಸಕಾಲ ಅರ್ಜಿ ಸಲ್ಲಿಸಿ ಸೇವೆಯನ್ನೂ ಪಡೆಯಬಹುದು. ಸಕಾಲ ಸೇವೆ ಡಿಜಿಟಲೀಕರಣಗೊಂಡರೆ ಡಿಜಿಟಲ್ ಹೆಜ್ಜೆ ಗುರುತಿನ (ಫುಟ್ ಪ್ರಿಂಟ್) ಮೂಲಕ ಅರ್ಜಿ ಎಲ್ಲಿದೆ? ವಿಳಂಭಕ್ಕೆ ಕಾರಣವೇನು? ಎಂಬ ಕುರಿತ ಮಾಹಿತಿ ನಮಗೂ ಲಭ್ಯವಾಗುತ್ತದೆ. ಹೀಗಾಗಿ ಮುಂದಿನ 5 ವರ್ಷದಲ್ಲಿ ಸಕಾಲ ಸಂಪೂರ್ಣ ಡಿಜಿಟಲ್ ಆಗಬೇಕು” ಎಂದು ಸೂಚಿಸಿದರು.

ಸಭೆಯಲ್ಲಿ ಕಂದಾಯ ಆಯುಕ್ತರಾದ ಸುನೀಲ್ ಕುಮಾರ್ ಸೇರಿದಂತೆ ಎಲ್ಲಾ ಇಲಾಖೆಯ ಕಾರ್ಯದರ್ಶಿಗಳೂ ಹಾಜರಿದ್ದರು.



ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, “ಸಕಾಲ ಕಾಯ್ದೆಯ ಅಡಿಯಲ್ಲಿ 100 ಇಲಾಖೆಗಳಿಂದ ಒಟ್ಟು 1201 ಸೇವೆಗಳನ್ನು ಜನ-ರಿಗೆ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ 29 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಪೈಕಿ ಶೇ.5 ರಷ್ಟು ಸೇವೆಗಳನ್ನು ವಿಳಂಭವಾಗಿ ನೀಡಲಾಗಿದೆ. ಶೇ.07 ರಷ್ಟು ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗಿದೆ. ಸಕಾಲ ಕಾಯ್ದೆ 5(2) ರ ಪ್ರಕಾರ ಯಾವುದೇ ಅರ್ಜಿಯನ್ನು ತಿರಸ್ಕರಿಸಬೇಕಾದರೆ ಸೂಕ್ತ ಕಾರಣವನ್ನು ನಮೂದಿಸಬೇಕು. ಆದರೆ, ಅನೇಕರು ಈ ನಿಯಮವನ್ನು ಪಾಲಿಸಿಲ್ಲ” ಎಂದು ಅಸಮಾಧಾನ ಹೊರಹಾಕಿದರು.

## ಸಕಾಲಕ್ಕೆ ಮತ್ತಷ್ಟು ಹೊಸ ಸೇವೆ ಸೇರ್ಪಡೆ!

ಸಕಾಲ ಕಾಯ್ದೆಯ ಅಡಿಯಲ್ಲಿ ಈಗಾಗಲೇ ಹಲವಾರು ಸೇವೆಗಳನ್ನು ಜನರಿಗೆ ಒದಗಿಸಲಾಗುತ್ತಿದೆ. ಇದರ ಜೊತೆಗೆ ಮತ್ತಷ್ಟು ಸೇವೆಗಳನ್ನು ಹೊಸದಾಗಿ ಸೇರಿಸಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಅಧೀನ ಇಲಾಖೆಗಳಾದ ಕರ್ನಾಟಕ ರಾಜ್ಯ ಶುಶ್ರೂಷೆ ಪರಿಷತ್ತು, ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿ, ಕರ್ನಾಟಕ ರಾಜ್ಯ ಶುಶ್ರೂಷೆ ಪರೀಕ್ಷಾ ಮಂಡಳಿ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 130 ಹೊಸ ಸೇವೆಗಳನ್ನು ನೀಡಲು ಪ್ರಸ್ತಾವನೆ ಸಲ್ಲಿಸಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಹಾಗೂ ಅಧೀನ ಇಲಾಖೆಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸಂಶೋಧನೆ ಮತ್ತು ತರಬೇತಿ ಇಲಾಖೆ ಈಗಾಗಲೇ 65 ಸೇವೆಗಳನ್ನು ನೀಡುತ್ತಿದ್ದು, ಹೊಸದಾಗಿ 63 ಸೇವೆಗಳನ್ನು ನೀಡಲು ಮುಂದಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈಗಾಗಲೇ 22 ಸೇವೆಗಳನ್ನು ನೀಡುತ್ತಿದ್ದು, ಹೊಸದಾಗಿ 16 ಸೇವೆಗಳನ್ನು ನೀಡಲು ಪ್ರಸ್ತಾವನೆ ಸಲ್ಲಿಸಿದೆ.

ಇದೇ ರೀತಿ ಕೃಷಿ ಇಲಾಖೆ, ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಾನೂನು ಇಲಾಖೆ, ಸಾರಿಗೆ ಇಲಾಖೆ, ಒಳಾಡಳಿತ ಇಲಾಖೆ, ವಸತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಸಹಕಾರ ಇಲಾಖೆ, ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಆರ್ಥಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಯೂ ಹೊಸ ಸೇವೆಗಳ ಪ್ರಸ್ತಾವನೆ ಸಲ್ಲಿಸಿದ್ದು, 500 ಕ್ಕೂ ಹೆಚ್ಚು ಹೊಸ ಸೇವೆಗಳ ಜನರಿಗೆ ಶೀಘ್ರದಲ್ಲೇ ಲಭ್ಯವಾಗಲಿದೆ.ಥ

# 4.15 ಲಕ್ಷ ಮೌಲ್ಯದ ಬೈಕ್‌ಗಳ ಕಳವು : ಮೂವರ ಬಂಧನ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಪಟ್ಟಣ ಸೇ-ರಿದಂತೆ ವಿವಿಧೆಡೆ ಸುಮಾರು 4.15 ಲಕ್ಷ ಮೌಲ್ಯದ ಬೈಕ್‌ಗಳನ್ನು ಕದ್ದ ಹಾಗೂ ಮಲ್ಲಯ್ಯ ದೇವಸ್ಥಾನ ದೋಚಲು ಯತ್ನಿಸಿದ ಮೂವರು ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸುವಲ್ಲಿ ಸ್ಥಳೀಯ ಪೊಲೀಸ್ ಠಾಣೆಯ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಪಟ್ಟಣದಲ್ಲಿ ಗುರುವಾರ ನಸುಕಿನ ಜಾವ ಮಡಿವಾಳ ಮಾಚಿದೇವರ ದೇವಸ್ಥಾನದ ಮುಂದೆ ಅನುಮಾನಸ್ಪದವಾಗಿ ಅಲೆಯುತ್ತಿದ್ದ ಮೂವರು ವ್ಯಕ್ತಿಗಳನ್ನು ಸ್ಥಳೀಯ ಪೊಲೀಸ್ ಸಿಬ್ಬಂದಿ ಠಾಣೆಗೆ ಕರೆ ತಂದು ವಿಚಾರಣೆಗೆ ಒಳಪಡಿಸಿದಾಗ ಆರೋಪಿಗಳು ತಾವು ಪಟ್ಟಣ ಸೇ-ರಿದಂತೆ ಯಾದಗಿರಿ ಜಿಲ್ಲೆಯ ವಿವಿಧೆಡೆ ಕದ್ದ 10 ಬೈಕ್ ಹಾಗೂ ಕಳೆದ ಕೆಲವು ದಿನಗಳ ಹಿಂದೆ ಮಲ್ಲಯ್ಯ ದೇವಸ್ಥಾನದಲ್ಲಿ ಕಾಣಿಕೆ ಹುಂಡಿಯನ್ನು ಕಳ್ಳತನ ಮಾಡಲು ಪ್ರಯತ್ನಿಸಿದ್ದನ್ನು ಒಪ್ಪಿಕೊಂಡಿದ್ದಾರೆ.


ಆರೋಪಿಗಳು ಕಲಬುರ್ಗಿ ಹಾಗೂ ಯಾದಗಿರಿ ಜಿಲ್ಲೆಗಳ ಅನೀಲಕುಮಾರ ಬಾಗೋಡಿ, ವೆಂಕಟೇಶ ನೀಡಗಿ, ಶರಣಯ್ಯಸ್ವಾಮಿ ಗೊಬ್ಬಿ ಎಂದು ತಿಳಿದು ಬಂದಿದೆ.

ಕಳೆದ ಕೆಲವು ದಿನಗಳಿಂದ ಪಟ್ಟಣದಲ್ಲಿ ಹೆಚ್ಚುತ್ತಿರುವ ಕಳವು ಪ್ರಕರಣಗಳು ಪೊಲೀಸ್ ಇಲಾಖೆಗೆ ಸವಾಲಾಗಿದ್ದವು. ಇವುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ಅಧೀಕ್ಷಕ ಋಷಿಕೇಶ ಸೋನಾವಣೆ, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಸ್.ಎಮ್.ಮಾರಿಹಾಳ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮನಗೌಡ ಹಟ್ಟಿ ಇವರ ಮಾರ್ಗದರ್ಶನದಲ್ಲಿ ವಿಜಯಪುರ ಗ್ರಾಮಾಂತರ ಉಪವಿಭಾಗದ ಡಿಎಸ್‌ಪಿ ಗಿರಿಮಲ್ಲ ತಳಕಟ್ಟಿ, ಸಿಪಿಐ ಆನಂದರಾವ್ ಎಸ್. ಎನ್, ಪಿಎಸೈಗಳಾದ ಬಸವರಾಜ ತಿಪ್ಪಾರಡ್ಡಿ, ಎಸ್.ಬಿ.ನಡುವಿನಕೇರಿ ನೇತೃತ್ವದಲ್ಲಿ ತನಿಖಾ ತಂಡ ರಚಿಸಿ ಕಾರ್ಯಾಚರಣೆ ಆರಂಭಿಸಿದ್ದರು. ಕೊನೆಗೆ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯ ತನಿಖಾ ತಂಡದಲ್ಲಿ ಸಿಬ್ಬಂದಿ ಗುರು ಸಿಂಗೆ, ಬಿ.ಎಸ್.ಮೇಡೆದಾರ, ಎಸ್.ಎಸ್. ಸಿನ್ನೂರ, ಎಮ್.ಎಸ್.ಮುಜಾವರ, ಆರ್.ಬಿ.ಕುಂಬಾರ, ಕೆ.ವೈ.ಕರಿಕಟ್ಟಿ, ವಿ.ಎಚ್.ಶಾಂತಗಿರಿ, ತೌಸೀಫ್ ಎಂ.ಪಿ, ಜಾವೀದ್ ಎ.ಎನ್, ವೈ.ಬಿ.ಬಜಂತ್ರಿ, ವಿ.ಎಲ್.ಕೆಳಗಿನಮನಿ, ಎಸ್.ಎಸ್. ಬಿರಾದಾರ, ಸಂಜೀವ ಹೊಸಮನಿ ಪಾಲ್ಗೊಂಡಿದ್ದರು.

# ಎಂಎಸ್‌ಐಎಲ್ ಮದ್ಯದಂಗಡಿ ಕಳವು

**ಉದಯರಶ್ಮಿ ನ್ಯೂಸ್**



ಸಿಂದಗಿ: ತಾಲೂಕಿನ ರಾಂಪೂರ ಗ್ರಾಮದಲ್ಲಿ ಮಧ್ಯರಾತ್ರಿ ಸುಮಾರು 3 ಗಂಟೆ 30 ನಿಮಿಷಕ್ಕೆ ಎಂ.ಎಸ್.ಐ. ಎಲ್ ಮದ್ಯದ ಅಂಗಡಿಗೆ ನಾಲ್ಕು ಜನ ದರೋಡೆಕೋರರು ಒಳ ನುಗ್ಗಿ ಹಣ ಹಾಗೂ ಮದ್ಯ ತೆಗೆದುಕೊಂಡು ಪರಾರಿಯಾಗಿದ್ದಾರೆ.

ಈ ವೇಳೆ ಮಧ್ಯದ ಅಂಗಡಿ, ಬಂಗಾರದ ಅಂಗಡಿ, ಬುಕ್ ಸ್ಟಾಲ್ ಸೇರಿ ಮೂರು ಅಂಗಡಿಗಳು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದು ಬಂದಿದೆ.

ಬೆಳಗ್ಗೆ 11ಗಂಟೆಗೆ ಮಧ್ಯದ ಅಂಗಡಿಯ ಬಾಗಿಲು ತೆಗೆಯಲು ಹೋದ ಎಂ.ಎಸ್.ಐ.ಎಲ್ ಕೆಲಸಗಾರ ನೋಡಿ ಅನುಮಾನದಿಂದ ಮೇಲಧಿಕಾರಿಗಗಳಿಗೆ ವರದಿ ತಿಳಿಸಿರುತ್ತಾರೆ. ಸಿಂದಗಿ ಅಬಕಾರಿ ಉಪನಿರೀಕ್ಷಕರು ದಿಲೀಪ್ ಸಿಂಗ್ ರಜಪೂತ ಸ್ಥಳಕ್ಕೆ ಭೇಟಿ ನೀಡಿ ಒಳಗೆ ಹೋಗಿ ಸಿ.ಸಿ ಕ್ಯಾಮೆರಾ ಓಪನ್ ಮಾಡಿದಾಗ. ಮುಖಕ್ಕೆ ಬಟ್ಟೆಗಳು ಕಟ್ಟಿಕೊಂಡು ಒಳಗೆ ನುಗ್ಗಿರುವ ದೃಶ್ಯ ಕಂಡು ಬಂದಿದೆ. 7ಸಾವಿರ ನಗದು ಹಣ ಹಾಗೂ 8 ಬಿಯರ್ ಬಾಟಲ್ ಮತ್ತು 5ಐಬೀ ವಿಸ್ಕಿ, ತೆಗೆದುಕೊಂಡು ಪರಾರಿಯಾಗಿದ್ದಾರೆ.


ಸಿ.ಸಿ ಕ್ಯಾಮರಾದಲ್ಲಿ 4 ಜನ ಕಳ್ಳರು ಕಾಣಿಸಿಕೊಂಡಿದ್ದಾರೆನ್ನಲಾಗಿದೆ.

ಈ ವಿಷಯ ಸಿಂದಗಿ ಪೊಲೀಸ್ ಠಾಣೆಗೆ ತಿಳಿಸಿದಾಗ, ಸ್ಥಳಕ್ಕೆ ಸಿಂದಗಿ ಪಿ.ಎಸ್.ಐ ಭೀಮಪ್ಪ ರಬಕವಿ ತಂಡದ ಸಮೇತ ಬಂದು ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಸಿಂದಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದೆ.

## ರಾಜ ನುಡಿ

ನಂಬಿಕೆ ದೃಢವಾಗಿದ್ದಾಗ ಪ್ರಾರ್ಥನೆ ದೀರ್ಘವಾಗಿರಬೇಕಿಲ್ಲ. ಪ್ರೀತಿ ಪ್ರಾಮಾಣಿಕವಾಗಿದ್ದಾಗ ವಿಸ್ತಾರವಾದ ವಿವರಣೆ ಬೇಕಿಲ್ಲ..

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 276

*ಅರುಹನೆ ಮರದು ಕುರುಹನೆ ಹರಿದ!*

*ಅರುಹ ಅರಿಯಲೆಂದು*
*ಕುರುಹ ಕೈಯಲ್ಲಿ ಕೊಟ್ಟ!*
*ಅರುಹನೆ ಮರದು ಕುರುಹನೆ ಹರಿದ!*
*ಈ ಕುರುಂಬರಿಗಿನ್ನೆತ್ತಣ ಮುಕ್ತಿಯೊ?*
*ರಾಮನಾಥ.*
*– ಜೇಡರ ದಾಸಿಮಯ್ಯನವರು*

ಇಷ್ಟಲಿಂಗವೆನ್ನುವುದು ನಮ್ಮ ಅರಿವು ಜಾಗೃತಗೊಳಿಸಲು ಶರಣರು ನೀಡಿದ ಅದ್ಭುತವಾದ ಸಾಧನ, ಅದರ ಮೂಲಕ ನಮ್ಮ ಅರಿವನ್ನು ಜಾಗೃತಗೊಳಿಸದೆ ಅದನ್ನೇ ಅರಿವೆಂದು(ದೇವ) ಭಾವಿಸಿ ಜೀವನಪೂರ್ತಿ ಸ್ಥಾವರ ರೂಪವನ್ನೇ ಪೂಜಿಸುವವರನ್ನು ಜೇಡರ ದಾಸಿಮಯ್ಯನವರು ಎಚ್ಚರಿಸಿದ್ದಾರೆ, ಇಷ್ಟಲಿಂಗದ ಮೂಲಕ ಮಹಾಲಿಂಗವನು ಅರಿಯಲು ಸೂಚಿಸಿದ್ದಾರೆ. ಕುರುಹುವಿನ ಮೂಲಕ ಅರಿವು ಜಾಗೃತಗೊಳ್ಳಲಿ. ಕುರುಹು ಅರುಹು ಅಲ್ಲ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ತಿಕೋಟಾದಲ್ಲಿ ಸಂಭ್ರಮದ ಎಳ್ಳ ಅಮವಾಸ್ಯೆ ಆಚರಣೆ । ಸಾಮೂಹಿಕ ಭೋಜನ

# ಭೂತಾಯಿ ಮಡಿಲಲ್ಲಿ ಊಟ ಸವಿದ ರೈತಾಪಿ ವರ್ಗ

**ಉದಯರಶ್ಮಿ ನ್ಯೂಸ್**

ತಿಕೋಟಾ: ಗ್ರಾಮೀಣ ಭಾಗದ ರೈತಾಪಿ ವರ್ಗ ಆಚರಿಸುವ ವಿಶೇಷ ಹಬ್ಬಗಳಲ್ಲಿ ಎಳ್ಳ ಅಮವಾಸ್ಯೆ ಒಂದು ಹಬ್ಬವಾಗಿದೆ. ಈ ದಿನ ರೈತ ತನ್ನ ಕುಟುಂಬ ವರ್ಗ, ರಕ್ತ ಸಂಬಧಿಗಳು ಹಾಗೂ ಆತ್ಮಿಯರನ್ನು ಕರೆದು ತೋಟದಲ್ಲಿ ಬೆಳೆದ ಫಸಲಿನ ಮಧ್ಯೆ ಉತ್ಸಾಹದಿಂದ ಭೂ ತಾಯಿಗೆ ಪೂಜೆ ಸಲ್ಲಿಸಿ ಎಲ್ಲರೊಟ್ಟಿಗೆ ಮೃಷ್ಟಾನ್ನ ಭೋಜನ ಸವಿದು ಹಬ್ಬ ಆಚರಣೆ ಮಾಡುತ್ತಾನೆ. ತಾಲ್ಲೂಕಿನ ಬಹುತೇಕ ಹಳ್ಳಿಗಳ ರೈತರ ತೋಟದಲ್ಲಿ ಗುರುವಾರ ಸಂಭ್ರಮದಿಂದ ಹಬ್ಬ ಆಚರಿಸಿದರು.

ರೈತ ಈ ದಿನ ರೈತ ತಾನು ಬೆಳೆದ ಬೆಳೆ ಸುರಕ್ಷಿತವಾಗಿರಲಿ ಎಂದು ತೋಟದ ಬನ್ನಿ ಮರ ಹಾಗೂ ಜೋಳ, ಕಡಲೆ ಇತರೆ ಬೆಳೆಯ ಮಧ್ಯೆ ಐದು ಕಲ್ಲನ್ನು ಇಟ್ಟು, ವಿಭೂತಿ ಕುಂಕುಮ ಅರಿಷಿನ ಹಚ್ಚಿ ಭಕ್ತಿ ಭಾವದಿಂದ ಪ್ರಕೃತಿಯನ್ನು ಪೂಜಿಸುತ್ತಾನೆ. ಇಡೀ ತೋಟದ ಸುತ್ತ ತಿರುಗುತ್ತಾ ಚರಗ ಚೆಲ್ಲಿದರು.





ಮನೆಯಲ್ಲಿ ತಯಾರಿಸಿದ ವಿವಿಧ ಖಾಧ್ಯಗಳ ಊಟ ಸವಿಯಲು ರೈತ ಆತ್ಮಿಯರನ್ನು ಆಹ್ವಾನಿಸಿ ಸಜ್ಜೆ ರೊಟ್ಟಿ, ಮೊಸರು, ಹಿಂಡಿ, ಕೆಂಪು ಚಟ್ನಿ, ಸೆಂಗಾ ಹೋಳಗಿ, ಚಿತ್ರಾನ್ನ, ಬಜಿ, ಕಡುಬು, ಪುಂಡಿ ಪಲ್ಯೆ ವಿವಿಧ ತರಹದ ರುಚಿಕರವಾದ ಊಟವನ್ನು ಪ್ರಕೃತಿ ಮಡಿಲಿನಲ್ಲಿ ಕುಳಿತು ಸವಿದರು.

ಅಧುನಿಕತೆಯ ಭರದಲ್ಲಿ ಜೀವನ ನಡೆಸುವ ನಾವುಗಳು ಹಳೆಯಕಾಲದ ಎತ್ತಿನ ಬಂಡೆ ಮರೆತು ಈಗಿನ ಕಾಲದ ಕಾರು, ಬೈಕ್, ಟ್ರ್ಯಾಕ್ಟರ್ ಮೂಲಕ ಜನರು ತೋಟಗಳತ್ತ ಸಾಗುತ್ತಿರುವ ದೃಶ್ಯ ಸಾಮಾನ್ಯವಾಗಿತ್ತು. ಪಟ್ಟಣದಿಂದ ಬಂದ ಸಂಭಂದಿಕರು ಹಾಗೂ ಅವರ ಮಕ್ಕಳು ಈ ದಿನ ತೋಟದ ಪ್ರಕೃತಿ ಸೌಂದರ್ಯ ಸವಿದು ಈ ಹಬಬ ಆಚರಿಸಿದರು.



# ಕಾಲುವೆಗೆ ನೀರು ಹರಿಸಲು ಪ್ರೊ.ಯಂಕಂಚಿ ಮನವಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ಕೃಷ್ಣಾ ನದಿಯ ಅಚ್ಚುಕಟ್ಟು ಪ್ರದೇಶದ ಹಿಂಗಾರು ಹಂಗಾಮಿನ ಬೆಳೆಗಳ ರಕ್ಷಣೆಗೆ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯದಿಂದ ನೀರು ಹ–ರಿಸಿದ ರಾಜ್ಯ ಸರ್ಕಾರದ ನಿರ್ಧಾರ ತುಂಬಾ ಸ್ವಾಗತಾರ್ಹವಾದುದೆಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರೊ.ಎಂ.ಜಿ ಎಂಕಂಚಿ ಹೇಳಿದ್ದಾರೆ.

ಈ ಕುರಿತು ಗುರುವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ಅದರಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಅವಳಿ ಜಿಲ್ಲೆಗಳ (ವಿಜಯಪುರ ಬಾಗಲಕೋಟೆ) ರೈತರ ತ್ಯಾಗ ಬಹುದೊಡ್ಡದೆಂಬುವುದು ಸರ್ಕಾರ ಮರೆಯಬಾರದು. ಅವಳಿ ಜಿಲ್ಲೆಯ ಕೃಷಿ ಅವಲಂಬಿತ ರೈತ ಸಮುದಾಯಕ್ಕೆ ನಿರಾಸೆ ಉಂಟು ಮಾಡದೆ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎಂಬಂತೆ ಸರ್ಕಾರ ಮಲತಾಯಿ ಧೋರಣೆ ಬಿಟ್ಟು ಕೃಷಿ ಅವಲಂಬಿತ ಎಲ್ಲ ರೈತಾಪಿ ವರ್ಗಕ್ಕೆ ಕಾಲುವೆಗಳ ಮೂಲಕ ನೀರು ಹರಸುಸುವುದ–ರಿಂದ ತುಂಬಾ ಸಹಾಯವಾಗುತ್ತದೆ. ಕಾರಣ ಈ ನಿಟ್ಟಿನಲ್ಲಿ ತಕ್ಷಣ ಸರ್ಕಾರ ಮುತುವರ್ಜಿಯನ್ನು ವಹಿಸಿ ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿಯ ಕಾಲುವೆಗಳಿಗೆ ಆಲಮಟ್ಟಿ ಆಣೆಕಟ್ಟಿನ ಎಡ ಮತ್ತು ಬಲ ದಂಡೆಯಿಂದ ನೀರು ಹರಿಸಬೇಕೆಂದು ಆಗ್ರಹಿಸಿದರು.

ರೈತರ ಹಿಂಗಾರು ಹಂಗಾಮಿನ ಬೆಳೆಗಳಾದ ಜೋಳ,ಗೋಧಿ, ಮೆಣಸಿನಕಾಯಿ,ಹಾಗೂ ಈರುಳ್ಳಿ ಬೆಳೆಗಳನ್ನು ಬೆಳೆಯುವ ಸಲುವಾಗಿ ಸಾರ್ವಜನಿಕರ ಮತ್ತು ಜಾನುವಾರಗಳಿಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಕನಿಷ್ಟ 20 ದಿನಗಳಿಗೊಮ್ಮೆ ಕಾಲುವೆಗೆ ನೀರು ಹರಿಸಬೇಕೆಂದು ಮುಖ್ಯಮಂತ್ರಿ, ನೀರಾವರಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್ ಹಾಗೂ ಜಿಲ್ಲೆಯ ಸಚಿವರು ಮತ್ತು ಶಾಸಕರಲ್ಲಿ ಅವರು ಮನವಿ ಮಾಡಿದ್ದಾರೆ.

# ಟೇಲರ್ ಲಾರಿ ವಿದ್ಯುತ್ ಕಂಬ&ತಳ್ಳುಗಾಡಿಗಳಿಗೆ ಡಿಕ್ಕಿ!

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ಪಟ್ಟಣದ ಐತಿಹಾಸಿಕ ಬಸವೇಶ್ವರ ದೇವಸ್ಥಾನದ ಮಹಾದ್ವಾರದ ಮುಂಭಾಗ ಬುಧವಾರ ರಾತ್ರಿ ಟೇಲರ್ ಲಾರಿಯೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಪಾದಚಾರಿ ರಸ್ತೆ ಮೇಲೆ ನುಗ್ಗಿ ಅಲ್ಲಿನ ಅಲಂಕಾರಿಕ ವಿದ್ಯುತ್ ಕಂಬ ಹಾಗೂ ಪಾದಚಾರಿ ರಸ್ತೆಯಲ್ಲಿಟ್ಟಿದ್ದ ಒತ್ತು ಗಾಡಿ, ವಿವಿಧ ವ್ಯಾಪಾರಸ್ಥರು ಇಟ್ಟಿದ್ದ ಹಣ್ಣು–ಹಂಪಲ, ವಿಭೂತಿ ಸೇರಿದಂತೆ ವಿವಿಧ ಸಾಮಗ್ರಿಗಳು ಹಾನಿಯಾದ ಘಟನೆ ನಡೆದಿದೆ.

ವಿಜಯಪುರದಿಂದ ಹೂವಿನಹಿಪ್ಪರಗಿ ಕಡೆಗೆ ಹೊರಟಿದ್ದ ಟೇಲರ್ ಲಾರಿಯಲ್ಲಿ ಯಾವುದೇ ಸಾಮಗ್ರಿಗಳು ಇರಲಿಲ್ಲ. ರಭಸವಾಗಿ ಬರುತ್ತಿದ್ದ ಟೇಲರ್ ಲಾರಿ ಬುಧವಾರ ರಾತ್ರಿ ಸುಮಾರು 9 ಗಂಟೆಯ ನಂತರ ನೋಡುತ್ತಿದ್ದಂತೆ ರಸ್ತೆಯ ಬಲಕ್ಕೆ ಇರುವ ವಿಭಾಜಕದ ಮಧ್ಯದಲ್ಲಿರುವ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ರಭಸಕ್ಕೆ ಒಂದು ವಿದ್ಯುತ್ ಕಂಬ ನೆಲಕ್ಕೆರುಳಿದೆ. ನಂತರ ಚಾಲಕನ ನಿಯಂತ್ರಣ ತಪ್ಪಿ ಟೇಲರ್ ಲಾರಿ ಎಡಕ್ಕೆ ಬಸವೇಶ್ವರ ದೇವಸ್ಥಾನದ ಮಹಾದ್ವಾರದ ಮುಂಭಾಗವಿರುವ ಪಾದಚಾರಿ ರಸ್ತೆ ಮೇಲೆ ಒಮ್ಮೆಲೆ ನುಗ್ಗಿದೆ. ಈ ವೇಳೆಯಲ್ಲಿ ಯಾವುದೇ ವಾಹನ, ಜನರ ಸಂಚಾರವಿಲ್ಲದೇ ಇರುವದರಿಂದಾಗಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಈ ಟೇಲರ್ ಲಾರಿ ತಾಲೂಕಿನ ಹೂವಿನಹಿಪ್ಪರಗಿ ಹತ್ತಿರ ಕಾಲುವೆ ಕಾಮಗಾರಿ ಮಾಡುತ್ತಿರುವ ಜೆಎ□□□ಸ್ ಕನ್ಸಕ್ಷನ್ ಕಂಪನಿಗೆ ಸೇರಿದ್ದು ಎಂದು ತಿಳಿದುಬಂದಿದೆ.

ಘಟನೆ ಸುದ್ದಿ ತಿಳಿಯುತ್ತಿದ್ದಂತೆ ಪಿಐ ಶರಣಗೌಡ ನ್ಯಾಮಣ್ಣನವರ, ಕ್ರೈಂ ಪಿಎ□□□ ಎನ್.ಟಿ.ದಡ್ಡಿಮನಿ ಅವರು ಸ್ಥಳಕ್ಕೆ ತಮ್ಮ ಸಿಬ್ಬಂದಿಗಳೊಂದಿಗೆ ಆಗಮಿಸಿ ಅಪಘಾತಕ್ಕೆ ಈಡಾದ ಟೇಲರ್ ಲಾರಿಯನ್ನು ಜೆಸಿಬಿಯ ನೆರವಿನಿಂದ ತೆರವುಗೊಳಿಸಿ ಟ್ರಾಫಿಕ್ ಸಮಸ್ಯೆಯಾಗದಂತೆ ನೋಡಿಕೊಂಡರು.

ಒಂದು ವೇಳೆ ಈ ಘಟನೆ ಹಗಲು ವೇಳೆ ಇಲ್ಲವೇ ಸಂಜೆ ಹೊತ್ತು ನಡೆದಿದ್ದರೆ ಅಪಾಯ ಬಹಳವಾಗುತ್ತಿತ್ತು. ರಸ್ತೆ ವಿಭಜಕದ ಮಧ್ಯೆದಲ್ಲಿ ಅಳವಡಿಸಲಾದ ವಿದ್ಯುತ್ ಕಂಬದ ಕೆಳಗೆ ಇರುವ ಕಟ್ಟೆ ವಿಭಜಕದ ಹೊರಗೆ ಬಂದಿದೆ. ಇದು ವಾಹನಗಳ ಅಪಘಾತಗಳಿಗೆ ಕಾರಣವಾಗುತ್ತಿದೆ. ವಿಜಯಪುರ ರಸ್ತೆಯಲ್ಲಿರುವ ರಸ್ತೆ ವಿಭಜಕದ ಮಧ್ಯೆ ಅಳವಡಿಸಲಾಗಿರುವ ವಿದ್ಯುತ್ ದೀಪಗಳು ಸಹ ಬೆಳಗದೇ ಇರುವದು ಸಹ ಅಪಘಾತವಾಗಲು ಕಾರಣವಾಗುತ್ತಿದೆ. ಟೇಲರ್ ಲಾರಿ ಚಾಲಕ ಕುಡಿದು ವಾಹನ ಚಾಲನೆ ಮಾಡಿದ ಪರಿಣಾಮ ಈ ಘಟನೆ ನಡೆದಿದೆ ಎಂಬ ಮಾತು ನೆರೆದ ಜನರಿಂದ ಕೇಳಿಬಂದಿತ್ತು.

ಟೇಲರ್ ಲಾರಿ ಅಪಘಾತ ನಡೆದ ಸ್ಥಳದಲ್ಲಿ ದಿನನಿತ್ಯವೂ ಒತ್ತು ಗಾಡಿ ಮೇಲೆ ಹಣ್ಣಿನ ವ್ಯಾಪಾರ ಮಾಡುತ್ತಿರುವ ಬಸಯ್ಯ ಗಣಾಚಾರಿ ಅವರು, ಈ ಅಪಘಾತ ನಡೆಯುವ ಕೆಲ ಸಮಯದ ಮುಂಚೆ ಅಷ್ಟೇ ಮನೆಗೆ ಇಂದು ಹೋದೆ. ನಿತ್ಯವೂ ನಾನು 9 ಗಂಟೆ ನಂತರ ಮನೆಗೆ ಹೋಗುತ್ತಿದ್ದೆ. ಇಂದು ಮಳೆ ಹನಿ ಬಂದ ಪರಿಣಾಮ ನಾನು ನನ್ನ ಮಗನೊಂದಿಗೆ 9 ಗಂಟೆಯೊಳಗೆ ವ್ಯಾಪಾರವನ್ನು ಬಂದ್ ಮಾಡಿ ಎಂದಿನಂತೆ ನನ್ನ ಒತ್ತು ಗಾಡಿ, ಹಣ್ಣು–ಹಂಪಲ ಪ್ಯಾಕ್ ಮಾಡಿ ಇಟ್ಟು ಮನೆಗೆ ಹೋಗಿ ಹತ್ತು ನಿಮಿಷ ಆಗಿರಲಿಲ್ಲ. ನನಗೆ ಈ ವಿಷಯ ಗೊತ್ತಾಗಿ ಓಡಿ ಬಂದೆ. ನನ್ನ ಒತ್ತು ಗಾಡಿ, ಹಣ್ಣು ಹಾನಿಯಾಗಿದೆ. ಇಂದು ಯಾವುದೇ ವ್ಯಾಪಾರವಿಲ್ಲದೇ ಖಾಲಿ ಕುಳಿತುಕೊಂಡಿದ್ದೇನೆ. ನನಗೆ ಹಾನಿಯಾಗಿದೆ ಎಂದ ಅವರು, ನನ್ನ ಮೇಲೆ ಬಸವಣ್ಣ ದೇವರು ಇದ್ದಾನೆ. ಅವನೇ ನನ್ನ ಮತ್ತು ಮಗನ ಜೀವ ಕಾಪಾಡಿದ್ದಾನೆ. ನಿತ್ಯದಂತೆ ನಾವು ಇಲ್ಲಿಯೇ ಇದ್ದರೆ ಖಂಡಿತ ಈ ಲಾರಿ ನಮ್ಮ ಜೀವ ತೆಗೆದುಕೊಳ್ಳುತ್ತಿತ್ತು. ದೇವರು ದೊಡ್ಡವ ನಮ್ಮ ಜೀವ ಕಾಪಾಡಿದ ಎಂದು ದೇವರಿಗೆ ನಮಸ್ಕಾರ ಮಾಡುತ್ತಾ ಹೇಳಿದರು.

ಶಿವುಬಾಯಿ ಭಜಂತ್ರಿ, ನೀಲಮ್ಮ ಗಣಾಚಾರಿ ಎಂಬುವವರ ಒತ್ತುಗಾಡಿ, ಹಣ್ಣು, ವಿಭೂತಿ ಸೇ–ರಿದಂತೆ ವಿವಿಧ ಸಾಮಗ್ರಿಗಳು ಹಾನಿಯಾಗಿವೆ. ಅಲ್ಲದೇ ಪುರಸಭೆಯವರು ಪಾದಚಾರಿ ರಸ್ತೆಗೆ ಅಳವಡಿಸಿದ ಗ್ರೀಲ್, ಅಲಂಕಾರಿಕ ವಿದ್ಯುತ್ ಕಂಬ ಸಹ ಕಿತ್ತುಹೋಗಿ ಅಂದಾಜು 2.50 ಲಕ್ಷ ರೂ. ಹಾನಿಯಾಗಿದೆ ಎಂದು ವಿದ್ಯುತ್ ಎಂಟರ್ ಪ್ರೈಜಿಸ್ ಕಂಪನಿಯ ವಿಜಿಟರ್ ದರ್ಶನಗೌಡ ಉಮೇಶ ಕೆ. ಈ ಕುರಿತು ಪ್ರಕರಣ ಬಸವನಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದಾರೆ.

# ದೇವರಹಿಪ್ಪರಗಿ: ಚರಗ ಚಲ್ಲಿ ಭೋಜನ ಸವಿದ ಜನತೆ



**ಉದಯರಶ್ಮಿ ನ್ಯೂಸ್**


ದೇವರಹಿಪ್ಪರಗಿ: ರೈತ ಸಮುದಾಯದ ಹಬ್ಬವಾದ ಎಳ್ಳು ಅಮವಾಸ್ಯೆಯಂದು ಪಟ್ಟಣ ಸೇರಿದಂತೆ ತಾಲ್ಲೂಕಿನದಾದ್ಯಂತ ರೈತರು ತಮ್ಮ ಆಪ್ತರು, ಮಿತ್ರರೊಂದಿಗೆ ಹೊಲ, ತೋಟಗಳಿಗೆ ತೆರಳಿ ಬನ್ನಿವೃಕ್ಷಕ್ಕೆ ಪೂಜೆ ಸಲ್ಲಿಸಿ, ಚರಗ ಚಲ್ಲಿ ಭೋಜನ ಸವಿದರು.

ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಅಮವಾಸ್ಯೆಯ ಸಂಭ್ರಮ ಬೆಳಗಿನಿಂದಲೇ ಕಂಡು ಬಂತು. ಹಿಂದೆ ಎತ್ತಿನಗಾಡಿಗಳ ಮೂಲಕ ಹೊಲಗಳಿಗೆ ತೆರಳುತ್ತಿದ್ದ ರೈತಕುಟುಂಬಗಳು ಈಗ ವಿರಳವಾಗಿ ಬಹುತೇಕರು ಕಾರು, ಜೀಪ, ಟ್ರ್ಯಾಕ್ಟರ್ ಸೇರಿದಂತೆ ವಿವಿಧ ವಾಹನಗಳ ಮೂಲಕ ತಮ್ಮ ತೋಟಗಳಿಗೆ ಪ್ರಯಾಣ ಬೆಳೆಸಿದ್ದು ಕಂಡು ಬಂತು. ಮಧ್ಯಾನ್ಹದ ಸಮಯಕ್ಕೆ ಹೊಲದ ಬನ್ನಿಮರಗಳಿಗೆ ಪೂಜೆ ಸಲ್ಲಿಸಿ ನಂತರ ಚರಗ ಚಲ್ಲಿದ ಮೇಲೆ ಸಜ್ಜೆ ರೊಟ್ಟಿ, ಮೋಸರು, ಸಜ್ಜೆ ಕಡಬು, ಶೇಂಗಾ ಹೋಳಿಗೆ ಸಹಿತ ಮೃಷ್ಟಾನ್ನ ಭೋಜನ ಸವಿದರು.

ಈ ಬಾರಿ ಮಳೆಗಾಲ ಉತ್ತಮವಾಗಿಲ್ಲದ ಕಾರಣ ಎರೆ ಹೊಲಗಳಲ್ಲಿ ಹಸಿಕಡಲೆ, ಜೋಳ ಬಹುತೇಕ ಕಾಣದಂತಾಗಿದೆ. ಅದಾಗ್ಯೂ ಸಂಪ್ರದಾಯದಂತೆ ರೈತ ಸಮುದಾಯ ಮಾತ್ರ ಮಕ್ಕಳು ಕುಟುಂಬ ಸಹಿತ ಎಳ್ಳು ಅಮವಾಸ್ಯೆಯಂದು ಭೂತಾಯಿಗೆ ಪೂಜೆ ಸಲ್ಲಿಸಿ, ನೈವಿಧ್ಯ ಅರ್ಪಿಸಿದರು.

# ಜ.21ರಂದು ಅಂಬಿಗರ ಚೌಡಯ್ಯ ಜಯಂತಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಜನವರಿ 21 ರಂದು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ. ಪಾಟೀಲ ಅವರು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಎಸ್. ಪಾಟೀಲ, ಸರ್ಕಾರದ ವಿಶೇಷ ಪ್ರತಿನಿಧಿ–2 ವಿಧಾನ ಪರಿಷತ್ ಸದಸ್ಯರಾದ ಪ್ರಕಾಶ ಹುಕ್ಕೇರಿ, ಸಂಸದರಾದ ರಮೇಶ ಜಿಗಜಿಣಗಿ, ಶಾಸಕರುಗಳಾದ ಯಶವಂತರಾಯಗೌಡ ವಿ. ಪಾಟೀಲ, ಹಣಮಂತ್ ಆರ್. ನಿರಾಣಿ, ಪ್ರಕಾಶ ರಾಠೋಡ, ಸುನೀಲಗೌಡ ಬಿ. ಪಾಟೀಲ, ಪಿ.ಎಚ್.ಪೂಜಾರ, ಅಪ್ಪಾಜಿ ಸಿ.ಎಸ್. ನಾಡಗೌಡ, ವಿಠ್ಠಲ ಕಟಕದೊಂಡ, ಭೀಮನಗೌಡ (ರಾಜುಗೌಡ) ಪಾಟೀಲ, ಅಶೋಕ ಮನಗೂಳಿ, ಮಹಾನಗರ ಪಾಲಿಕೆ ಮಹಾಪೌರ ಶ್ರೀಮತಿ ಮಹೇಜಬಿನ ಹೊರ್ತಿ ಭಾಗವಹಿಸಲಿದ್ದಾರೆ. ಬಬಲೇಶ್ವರದ ಶಾಂತವೀರ ಪ.ಪೂ. ಕಾಲೇಜ್ ಉಪನ್ಯಾಸಕರಾದ ಪ್ರೊ: ಮಹಾದೇವಿ ರೆಬಿನಾಳ ವಿಶೇಷ ಉಪನ್ಯಾಸ ನೀಡಲಿದ್ದಾರೆ. ತಾಜಪೂರದ ಶ್ರೀಮಂತ ಮಾದರ ಹಾಗೂ ಸಂಗಡಿಗರು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

# ತಾಲೂಕಿನಾದ್ಯಂತ ಎಳ್ಳ ಅಮವಾಸ್ಯೆ ಆಚರಣೆ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ಪಟ್ಟಣ ಸೇ–ರಿದಂತೆ ತಾಲೂಕಿನಾದ್ಯಂತ ಗುರುವಾರ ಎಳ್ಳ ಅಮವಾಸ್ಯೆಯಂಗವಾಗಿ ರೈತ ಬಾಂಧವರು ತಮ್ಮ ತಮ್ಮ ಹೊಲಗಳಲ್ಲಿ ಬೆಳೆದು ನಿಂತ ಬೆಳೆಗೆ ಮತ್ತು ಭೂತಾಯಿಗೆ ಪೂಜೆ ಸಲ್ಲಿಸಿ ಸಂಪ್ರದಾಯದಂತೆ ಚೆರಗ ಚೆಲ್ಲಿ ಸಂಭ್ರಮಿಸಿದರು.

ಈ ಸಲ ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗದೇ ಇರುವದ–ರಿಂದಾಗಿ ಬರಮಧ್ಯೆಯಲ್ಲಿಯೂ ಇರುವ ಅಲ್ಪಸ್ವಲ್ಪ ಬೆಳೆಯಲ್ಲಿ ಸಂಪ್ರದಾಯದ ಎಳ್ಳ ಅಮವಾಸ್ಯೆಯನ್ನು ರೈತ ಬಾಂಧವರು ಆಚರಿಸಿದರು.

ಎತ್ತಿನ ಬಂಡಿಗಳಲ್ಲಿ ಹೋಗುವದು ಅಷ್ಟಾಗಿ ಕಂಡುಬರಲಿಲ್ಲ. ಕೆಲ ರೈತ ಬಾಂಧವರು ತಮ್ಮ ಹೊಲಗಳಿಗೆ ತಮ್ಮ ಕುಟುಂಬ ಸದಸ್ಯರು, ಸ್ನೇಹಿತರೊಂದಿಗೆ ತೆರಳಿದರೆ, ಅಲ್ಪಸ್ವಲ್ಪ ಬೆಳೆ ಇದ್ದ ರೈತ ಬಾಂಧವರು ಮನೆಯವರೊಂದಿಗೆ ಹೋಗಿ ಚೆರಗ ಚೆಲ್ಲುವ ಹಬ್ಬ ಆಚರಿಸಿದರು. ಬೆಳಗ್ಗೆಯಿಂದಲೇ ಮನೆಗಳಲ್ಲಿ ಮಹಿಳೆಯರು ಎಳ್ಳ ಅಮವಾಸ್ಯೆ ಹಬ್ಬಕ್ಕಾಗಿ ಸಜ್ಜಿ ಕಡಬು, ಹೂರಣದ ಕಡಬು, ಹೂರಣದ ಹೋಳಗಿ, ಶೇಂಗಾದ ಹೋಳಗಿ, ಸಜ್ಜಿ ರೊಟ್ಟಿ, ಚಪಾತಿ, ವಿವಿಧ ತರಹದ ಕಾಳು, ತರಕಾರಿ ಪಲ್ಯೆ ಸೇರಿದಂತೆ ವಿವಿಧ ಖಾದ್ಯಗಳನ್ನು ತಯಾರಿಸಿ ನಂತರ ಊರ ದೇವರಿಗೆ ನೈವೇದ್ಯ ಹಿಡಿದು ಬುತ್ತಿ ಕಟ್ಟಿಕೊಂಡು ತಮ್ಮ ತಮ್ಮ ಹೊಲಗಳಿಗೆ ಎತ್ತಿನ ಬಂಡಿ, ಟ್ರ್ಯಾಕ್ಟರ್, ಟಂಟಂ ಸೇರಿದಂತೆ ಇತರೇ ವಾಹನಗಳ ಮೂಲಕ ಕುಟುಂಬ ಸದಸ್ಯರು ಹಾಗೂ ತಮ್ಮ ಬಂಧು ಬಳಗದೊಂದಿಗೆ ಹೊಲಗಳಿಗೆ ತೆರಳಿದರು.

ಹೊಲದಲ್ಲಿ ಬೆಳೆದು ನಿಂತ ಬೆಳೆಗೆ , ಹೊಲದ ಬನ್ನಿ ಮರದ ಕೆಳಗಿರುವ ಲಕ್ಷ್ಮೀದೇವಿಗೆ ವಿಶೇಷ ಪೂಜೆ ಸಲ್ಲಿಸಿ ಮನೆಯಿಂದ ತಂದ ನೈವೇದ್ಯವನ್ನು ಎಡೆ ಹಿಡಿದು ನಂತರ ಭೂತಾಯಿಗೆ ಧನ್ಯತಾ ಭಾವದೊಂದಿಗೆ ಸಾಮೂಹಿಕ ಚೆರಗ ಚೆಲ್ಲಿದರು. ನಂತರ ಸಾಮೂಹಿಕ ಭೋಜನದಲ್ಲಿ ಎಲ್ಲರೂ ಎಳ್ಳ ಅಮವಾಸ್ಯೆಯ ಊಟದ ಸವಿಯನ್ನು ಸವಿದರು.

ಜೋಳದ ಬೆಳೆ ಇದ್ದರೆ ಎಳ್ಳ ಅಮವಾಸ್ಯೆಯ ಸಂಭ್ರಮವೇ ಬೇರೆ ಎಂದು ರೈತರೊಬ್ಬರು ಹೇಳಿದರು. ಊಟದ ನಂತರ ಮಕ್ಕಳು ವಿವಿಧ ರೀತಿಯ ಆಟಗಳನ್ನು ಆಡುವದರೊಂದಿಗೆ ಸಂತಸಗೊಂಡರೆ ಹಿರಿಯರು ಕುಶಲೋಪರಿಯನ್ನು ಹಂಚಿಕೊಂಡರು. ಸಂಜೆ ಸೂರ್ಯಾಸ್ತ ಸಮಯ ಹತ್ತಿರವಾಗುತ್ತಿದ್ದಂತೆ ಮತ್ತೊಮ್ಮೆ ಭೂತಾಯಿಗೆ ನಮಸ್ಕರಿಸಿ ಮುಂಬರುವ ವರ್ಷದಲ್ಲಿ ಉತ್ತಮ ಮಳೆ–ಬೆಳೆ ದೇವರು ಕೊಡಲಿ ಎಂದು ಪ್ರಾರ್ಥಿಸಿ ತಮ್ಮ ತಮ್ಮ ಮನೆ ಕಡೆಗೆ ತೆರಳಿದ ದೃಶ್ಯ ಕಂಡು ಬಂದಿತು.

# ಇಂದು ವಿದ್ಯುತ್ ಸುರಕ್ಷತೆ ಅಭಿಯಾನ ಕಾರ್ಯಕ್ರಮ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಹೆಸ್ಕಾಂ ಇಲಾಖೆಯ ಕಾರ್ಯ ಮತ್ತು ಪಾಲನಾ ವಿಭಾಗದ ಕಚೇರಿಯಲ್ಲಿ ಜ.12 ರಂದು ಬೆಳಗ್ಗೆ 10 ಗಂಟೆಗೆ ವಿದ್ಯುತ್ ಸುರಕ್ಷತೆ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೆಸ್ಕಾಂ ಇಲಾಖೆಯ ವಿಜಯಪುರದ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಿಗೇರಿ ವಹಿಸುವರು. ಮುಖ್ಯ ಅತಿಥಿಗಳಾಗಿ ಹೆಸ್ಕಾಂ ಇಲಾಖೆಯ ಬೆಳಗಾವಿ ವಲಯದ ಮುಖ್ಯ ಅಭಿಯಂತರ ವಿ.ಪ್ರಕಾಶ, ಅತಿಥಿಗಳಾಗಿ ನಿವೃತ್ತ ಅಧೀಕ್ಷಕ ಅಭಿಯಂತರ ಬಿ.ಕೆ.ಗೊಟ್ಯಾಳ, ಉಪವಿದ್ಯುತ್ ಪರಿವೀಕ್ಷಕ ಎಸ್.ಎಚ್.ಪಾಟೀಲ, ಕಾರ್ಯನಿರ್ವಾಹಕ ಅಭಿಯಂತರ ಜೆ.ಎಲ್.ಜಾಧವ, ಕಾರ್ಯನಿರ್ವಾಹಕ ಅಭಿಯಂತರರಾದ ಸುನಂದಾ ಜಂಬಗಿ, ವ್ಹಿ.ಬಿ.ಕೋಲೆ, ಎಂ.ಎನ್.ಚನ್ನಗೊಂಡ, ಎಸ್.ಎ.ಬಿರಾದಾರ, ಹೆಸ್ಕಾಂ ನೌಕರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ವೈ.ಉಕ್ಕಲಿ, ಸಿ.ಎಸ್. ರೆಡ್ಡಿ, ಬಿ.ಟಿ.ಮ್ಯಾಗೇರಿ, ಎನ್ಟಿಪಿಸಿಯ ಎಜಿಎಂಗಳಾದ ಟಿ.ಆರ್. ಶಿವಪ್ರಸಾದ,–ಎಂ. ಶ್ರೀನಾಥ, ಅಟ್ರಿಯಾ ವಿಂಡ ಪವರ ಪ್ರೈ.ಲಿ.ದ ಡೆಪ್ಯೂಟ ಮ್ಯಾನೇಜರ ಮೊಹಮದ್ ಯುಸುಫ್,ಆರ್.ಬಿ.ಆರ್. ಕೆ. ಪ್ರೈ.ಲಿ.ದ ಮಹೇಶ ಶಿವಾಜಿ–ರಾವ ಸಣಪ್, ಗ್ರೀನ್ಕೋ ಮತ್ತು –ಚರ್ನ್ ಪೈವ್ ಪ್ರೈ.ಲಿ.ದ ಬಿ.ಬುನಿಯಾಮಿನ್, ಅಗ್ನಿಶಾಮಕ ಠಾಣಾಧಿಕಾರಿ ಸಂಗಮೇಶ ಶಿವಪೂಜಿ ಆಗಮಿಸುವರು ಎಂದು ಹೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಎಸ್.ಎಂ.ಬಿರಾದಾರ ತಿಳಿಸಿದ್ದಾರೆ.

# ಇಂಡಿ: ಚೆರಗ ಚೆಲ್ಲಿ ಸಂಭ್ರಮಿಸಿದ ಜನತೆ

**ಉದಯರಶ್ಮಿ ನ್ಯೂಸ್**



ಇಂಡಿ: ಸಕಲ ಜೀವಿಗಳಿಗೂ ಅನ್ನ ನೀಡುವ ಭೂತಾಯಿಗೆ ಎಲ್ಲ ರೈತ ಸಮುದಾಯ ನೈವೆಧ್ಯ ತೋರಿಸಿ ಕೃತಜ್ಞತೆ ಅರ್ಪಿಸುವುದೇ ಎಳ್ಳ ಅಮವಾಸ್ಯೆಯ ವಿಶೇಷ. ಭೂಮಿ ಉಳ್ಳ ಪ್ರತಿಯೊಬ್ಬ ರೈತರು ಈ ಅಮವಾಸ್ಯೆಯನ್ನು ಅತ್ಯಂತ ಸಂಭ್ರಮದೊಂದಿಗೆ ಆಚರಿಸಿದರು.

ತನ್ನಿಮಿತ್ತವಾಗಿ ಬೆಳಗ್ಗೆಯಿಂದಲೇ ಮಹಿಳೆಯರು ತರಹೇವಾರಿ ತರಕಾ–ರಿಯ ಪಲ್ಲೆಗಳು, ಸಿಹಿ ದಿನಸಿಗಳು ಭಕ್ಷಗಳು ಮಾಡಿದ್ದರು.

ನಂತರ ಎತ್ತಿನ ಗಾಡಿ, ದ್ವೀ ಚಕ್ರ, ಜೀಪು,ಕಾರು, ರಿಕ್ಷಾ, ಟಂ ಟಂ ಸೇ–ರಿದಂತೆ ಇನ್ನಿತರ ವಾಹನಗಳಲ್ಲಿ ತಮ್ಮ ಹೊಲಗಳಿಗೆ ಮಧ್ಯಾನ್ಹ 11 ರಿಂದ 12 ರ ವರೆಗೆ ತೆರಳಿದರು.

ತೋಟಗಳಿಲ್ಲದವರಿಗೆ ಹೊಲಗಳಿದ್ದವರು ಕರೆದುಕೊಂಡು ಹೋಗುವದು ವಿಶೇಷವಾಗಿತ್ತು.

ಹೊಲಗಳಲ್ಲಿರುವ ಬೆಳೆಗೆ, ಭಾವಿಗಳಿಗೆ, ಕರೆಂಟು ಇಂಜಿನುಗಳಿಗೆ ಮತ್ತು ಹೊಲದಲ್ಲಿರುವ ದೇವರ ಗುಡಿಯಲ್ಲಿ ಪೂಜೆ ಸಲ್ಲಿಸಿ ಚೆರಗ ಚೆಲ್ಲುವದು ವಿಶೇಷವಾಗಿತ್ತು.

ಮಹಿಳೆಯರು ಭಾವಿಗಳಲ್ಲಿ ತೆಪ್ಪಗಳನ್ನು ಮಾಡಿ ಪೂಜೆ ಸಲ್ಲಿಸಿದರು.

ಭೂಮಿತಾಯಿಗೆ ನೈವೆಧ್ಯ ರೂಪದಲ್ಲಿ ರೈತರು ಚೆರಗ ಚೆಲ್ಲುವದು ವಿಶೇಷವಾಗಿತ್ತು.

ಸಜ್ಜೆ ರೊಟ್ಟಿ, ಸಜ್ಜೆ ಹಿಟ್ಟಿನ ಕಡಬು, ಚವಳಿಕಾಯಿ, ಬೆಂಡೆಕಾಯಿ , ಪುಂಡಿ ಪಲ್ಲೆ, ಕಾಳು ಪಲ್ಲೆ , ಹೆಸರು ಕಾಳು, ಮೂಕಣಿ ಪಲ್ಲೆ, ಬದನೆಕಾಯಿ, ಎಳ್ಳು ಹಚ್ಚಿದ ಕಟಿರೊಟ್ಟಿ, ಹೂರಣ ಹೊಳಿಗೆ, ದಪಾಟಿ, ಶೆಂಗಾ ಹೊಳಿಗೆ, ತುಪ್ಪ, ಬಿಳಿ ಅನ್ನ, ಮಸಾಲಾ ಅನ್ನ, ಸಾಂಬಾರು, ಸೆಂಡಗಿ ಇನ್ನಿತರ ವಿಶೇಷ ಭಕ್ಷಗಳನ್ನು ಹೊಲದ ಪ್ರತಿಯೊಂದು ಮೂಲೆಗೂ ಅರ್ಪಿಸಿ ಪೂಜೆ ಮಾಡಿ ಸಜ್ಜೆ ರೊಟ್ಟಿ ಚವಳಿಕಾಯಿ ಚೆಂಗೆ ಭಲೋ ಎಂದು ಹೇಳುತ್ತ ನೈವೇಧ್ಯ ಸಮರ್ಪಿಸಿದರು. ಬಹುತೇಕ ರೈತರು ಹೊಲಗಳಲ್ಲಿ ಜೋಳ, ಗೋಧಿ, ಕಡಲೆ ಸೇರಿದಂತೆ ಇನ್ನಿತರ ಬೆಳೆ ಮೈ ದುಂಬಿ ಕೊಂಡಿರುವ ಮಾಗಿ ಹಬ್ಬದ ಕಾಲದಲ್ಲಿ ಹೊಲದಲ್ಲಿ ಕುಳಿತುಕೊಂಡು ಒಂದು ಸಂಭ್ರಮ ಹೀಗಾಗಿ ರೈತರು ತಮ್ಮ ಹೊಲಗಳಿಗೆ ತಮ್ಮ ಆತ್ಮೀಯರನ್ನು ಕರೆದು ಕೊಂಡು ಹೋಗಿ ಹೊಲದಲ್ಲಿ ಎಳ್ಳ ಅಮವಾಸೆಯ ವಿಶೇಷ ಊಟ ಮಾಡಿದರು. ಇದರಿಂದ ಭೂತಾಯಿ ಪ್ರಸನ್ನಳಾಗಿ ಫಸಲು ಹುಲುಸಾಗಿ ಬೆಳೆಯಲೆಂದು ಫ್ರಾರ್ಥಿಸುತ್ತಾರೆ.

ನಂತರ ಸಂಜೆ ಗೌಡರ ಮನೆಯ ಎತ್ತಿನ ಗಾಡಿಯನ್ನು ಜೋಳದ ದಂಟುಗಳಿಂದ ಸಿಂಗಾರ ಮಾಡಿ ದೀಪ ಹಚ್ಚಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ರೈತರೆಲ್ಲರೂ ಸೇರಿ ಮೆರವಣಿಗೆ ತೆಗೆದರು.

# ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ: ಪೂಜಾ ಪ್ರಥಮ

**ಉದಯರಶ್ಮಿ ನ್ಯೂಸ್**



ಇಂಡಿ: ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿನಿ ಪೂಜಾ ಸಾರವಾಡ ಇವರು ಕರ್ನಾಟಕ ಸರಕಾರದ ಕರ್ನಾಟಕ ಸ್ವೀಪ್ ಸಮಿತಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಪ್ರಾಚಾರ್ಯ ಆರ್.ಎಚ್. ರಮೇಶ ತಿಳಿಸಿದ್ದಾರೆ.

ವಿಜಯಪುರ ಜಿಲ್ಲಾ ಪಂಚಾಯತಿಯ ಜಿಲ್ಲಾ ಸ್ವೀಪ್ ಸಮಿತಿ ಏರ್ಪಡಿಸಿದ್ದ ಸ್ಪರ್ಧೆಯಲ್ಲೂ ಜಿಲ್ಲೆಗೆ ಮೊದಲಿಗಳಾಗಿ ಆಯ್ಕೆಯಾಗಿದ್ದ ಪೂಜಾ ಅವರು 2023–24ನೇ ಸಾಲಿನ ರಾಷ್ಟ್ರೀಯ ಮತದಾರ ದಿನಾಚರಣೆ ಅಂಗವಾಗಿ ನಡೆದ ಕನ್ನಡ ಭಾಷೆಯಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈಗ ಫಲಿತಾಂಶ ಪ್ರಕಟವಾಗಿದೆ ಎಂದು ಪ್ರಾಚಾರ್ಯರು ತಿಳಿಸಿದ್ದು, ಕಾಲೇಜು ಅಭಿವೃದ್ಧಿ ಸಮಿತಿಯು ವಿದ್ಯಾರ್ಥಿನಿಯನ್ನು ಅಭಿನಂದಿಸಿದೆ.

# ಸಶಸ್ತ್ರ ಪೊಲೀಸ್ ಕಾನ್ಸಟೇಬಲ್ ಹುದ್ದೆಗೆ ಜ.28ರಂದು ಪರೀಕ್ಷೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸಟೇಬಲ್ (ಸಿಎಆರ್ ಮತ್ತು ಡಿಎಆರ್) 3064 ಹುದ್ದೆಗಳಿಗೆ ಜ.28ರಂದು ಬೆಳಿಗ್ಗೆ 11 ರಿಂದ 12–30ರವರೆಗೆ ರಾಜ್ಯದಾದ್ಯಂತ ಲಿಖಿತ ಪರೀಕ್ಷೆ ಆಯೋಜಿಸಲಾಗಿದೆ.

ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಮುಂಬರುವ ದಿನಗಳಲ್ಲಿ ಕರೆ ಪತ್ರದ ಬಗ್ಗೆ ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡಲಾಗುವುದು. ಕರೆ ಪತ್ರದ ಲಿಂಕ್‌ನ್ನು ಸಹ ಕಳಿಸಲಾಗುವುದು. ಜಿಲ್ಲೆಯ ಅಭ್ಯರ್ಥಿಗಳು ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಋಷಿಕೇಶ ಸೋನಾವಣೆ ಅವರು ತಿಳಿಸಿದ್ದಾರೆ.

# ಮಹಿಳೆ–ಮಗು ಕಾಣೆ :ಪತ್ತೆಗೆ ಮನವಿ

**ಉದಯರಶ್ಮಿ ನ್ಯೂಸ್**





ವಿಜಯಪುರ: ನಗರದ ಕಾಲೇಬಾಗ ನಿವಾಸಿಯಾದ 24 ವರ್ಷದ ರುಕ್ಮಿಣಿ ಗಂ.ಯಲ್ಲಪ್ಪ ಬೇನೂರ ಎಂಬ ಮಹಿಳೆ ಹಾಗೂ 8 ವರ್ಷದ ಮುತ್ತು ಯಲ್ಲಪ್ಪ ಬೇನೂರ ಎಂಬ ಮಗನೊಂದಿಗೆ ಕಾಣೆಯಾಗಿರುವ ಕುರಿತು ವಿಜಯಪುರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದ ಮಹಿಳೆ ಹಾಗೂ ಮಗುವಿನ ಪತ್ತೆಗೆ ಪೊಲೀಸ್ ಇನ್ಸೆಕ್ಟರ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕಾಣೆಯಾಗಿರುವ ಮಹಿಳೆಯು ಅಂದಾಜು 5.2 ಎತ್ತರ, ಸಾಧಾರಣ ಮೈಕಟ್ಟು, ಕೋಲುಮುಖ, ಗೋಧಿಬಣ್ಣ, ಕನ್ನಡ ಭಾಷೆ ಬಲ್ಲವಳಾಗಿದ್ದು, ಈ ಚಹರೆಪಟ್ಟಿಯುಳ್ಳವರು ಪತ್ತೆಯಾದಲ್ಲಿ ಸಾರ್ವಜನಿಕರು ಪೊಲೀಸ್ ಅಧೀಕ್ಷಕರು ದೂ: 08352–250152, ಜಿಲ್ಲಾ ನಿಸ್ತಂತು ಕಚೇರಿ ದೂ: 08352–250844, ಮಹಿಳಾ ಪೊಲೀಸ್ ಠಾಣೆ ಮೊ: 9480804270 ಸಂಖ್ಯೆಗೆ ಮಾಹಿತಿ ನೀಡುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ.ಮದಭಾವಿಗೆ ಬಸವಭೂಷಣ ಪ್ರಶಸ್ತಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ಬಿ.ಎಲ್.ಡಿ.ಇ ಸಂಸ್ಥೆಯ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಡಾ. ಎಂ. ಎಸ್. ಮದಭಾವಿ ಅವರಿಗೆ ಬೆಳಗಾವಿ ಜಿಲ್ಲೆಯ ಅಥಣಿಯ ಶ್ರೀ ಮೋಟಗಿಮಠ ಈ ವರ್ಷದ ಬಸವಭೂಷಣ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಉತ್ತರ ಕರ್ನಾಟಕದ ಗಡಿಯುಲ್ಲಿರುವ ಶ್ರೀ ಮೋಟಗಿಮಠವು ಶತಮಾನಗಳಿಂದ ನಾಡು, ನುಡಿ, ಸಂಸ್ಕೃತಿ ಸಂವರ್ಧನೆಗಾಗಿ ಶ್ರಮಿಸುತ್ತ ಬಂದಿದೆ. ಪ್ರತಿವರ್ಷ ಶರಣಸಂಸ್ಕೃತಿ ಗಡಿನಾಡ ನುಡಿಹಬ್ಬ ಆಚರಿಸುವ ಈ ಮಠ ಗಡಿಯಲ್ಲಿ ಕನ್ನಡದ ಏಳಿಗೆಗಾಗಿ ಶ್ರಮಿಸುತ್ತಿದೆ. ಭಾಷಾ ಭಾವೈಕ್ಯತೆ, ಧರ್ಮ, ಸಮನ್ವಯತೆ, ಕನ್ನಡ ಜಾಗೃತಿಯ ಮೂಲಧ್ಯೇಯ ಹೊಂದಿದೆ.

ಜನೇವರಿ 24 ರಂದು ಬುಧವಾರ ನಡೆಯಲಿರುವ ಕಾರ್ಯಕ್ರಮದಲ್ಲಿ ಡಾ. ಎಂ. ಎಸ್. ಮದಭಾವಿ ಅವರಿಗೆ ಪ್ರಶಸ್ತಿ ಪ್ರಧಾನ ನಡೆಯಲಿದೆ.

ಪ್ರಶಸ್ತಿಗೆ ಆಯ್ಕೆಯಾಗಿರುವ ಡಾ. ಎಂ. ಎಸ್. ಮದಭಾವಿ ಅವರಿಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ, ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನೆ ಕೇಂದ್ರದ ನಿರ್ದೇಶಕ ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಸಿಬ್ಬಂದಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಭಾರತದ ಆಧ್ಯಾತ್ಮಿಕತೆಯ ಶಿಖರ ‘ಸ್ವಾಮಿ ವಿವೇಕಾನಂದ’

**ರಾಷ್ಟ್ರೀಯ ಯುವ ದಿನ (ಜ.12) ನಿಮಿತ್ತ ವಿಶೇಷ ಲೇಖನ**

**ಉದಯರಶ್ಮಿ ದಿನಪತ್ರಿಕೆ**

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಬೀದಿಯಲ್ಲಿ ಕಾಷಾಯ ವಸ್ತ್ರ ಧರಿಸಿದ ಆ ಯುವ ಸನ್ಯಾಸಿ ನಾಲ್ಕಾರು ನಾಯಿಗಳ ಗುಂಪು ಬೆನ್ನಟ್ಟಿ ಬಂದಾಗ ಹಿಂತಿರುಗಿ ಓಡಲಾರಂಭಿಸಿದ. ಆಗ ಅಲ್ಲಿಯೇ ಇದ್ದ ಓರ್ವ ವ್ಯಕ್ತಿ ಸನ್ಯಾಸಿಯನ್ನು ಕುರಿತು ಹಿಂತಿರುಗಿ ಓಡಬೇಡ ಕೈಯಲ್ಲಿರುವ ಕೋಲನ್ನು ಗಟ್ಟಿಯಾಗಿ ಎತ್ತಿ ಹಿಡಿ, ಎಂದು ಹೇಳಿದ. ಯುವ ಸನ್ಯಾಸಿಯು ಅಪರಿಚಿತ ವ್ಯಕ್ತಿ ಹೇಳಿದ ಮಾತಿನಂತೆ ಕೋಲನ್ನು ಹಿಡಿದು ದೃಢವಾಗಿ ನಿಂತನು. ಸನ್ಯಾಸಿಯ ದೃಢ ನಿಲುವನ್ನು ಕಂಡ ನಾಯಿಗಳು ಬಾಲಮುದುರಿಕೊಂಡು ಹೊರಟು ಹೋದವು. ಜೀವನದ ಬಹುಮುಖ್ಯ ಪಾಠವೊಂದನ್ನು ಕಲಿತ ಸನ್ಯಾಸಿ “ಕಷ್ಟಗಳು ಬಂದಾಗ ಹೆದರಿಕೊಂಡು ಕುಳಿತುಕೊಳ್ಳದೆ ಅವುಗಳನ್ನು ಧೈರ್ಯವಾಗಿ ಎದುರಿಸಿ” ಎಂದು ಜಗತ್ತಿಗೆ ಸಾರಿದ. ಭಾರತದ ಕೀರ್ತಿಯನ್ನು ಜಗದೆತ್ತರಕ್ಕೆ ಬೆಳೆಸಿದ ಆಧ್ಯಾತ್ಮದ ಭವ್ಯ ಇತಿಹಾಸವನ್ನು ರಚಿಸಿದ ಆ ವೀರ ವಿರಾಗಿಯೇ ನಮ್ಮ ಸ್ವಾಮಿ ವಿವೇಕಾನಂದರು.

ಸ್ವಾಮಿ ವಿವೇಕಾನಂದರು ಇಂದಿನ ಪಶ್ಚಿಮ ಬಂಗಾಳದ ಕೊಲ್ಕತ್ತದಲ್ಲಿ ಜನವರಿ 12 1863 ರಲ್ಲಿ ಜನಿಸಿದರು ತಂದೆ ವಿಶ್ವನಾಥ ದತ್ತ ತಾಯಿ ಭುವನೇಶ್ವರಿ ದೇವಿ. ವಿವೇಕಾನಂದರ ಪೂರ್ವ ನಾಮ ನರೇಂದ್ರನಾಥ ದತ್ತ. ವಕೀಲರಾದ ವಿಶ್ವನಾಥ ದತ್ತರ ಬಳಿ ಸಾಕಷ್ಟು ಜನ ತಮ್ಮ ನ್ಯಾಯಾಂಗ ಸಂಬಂಧದ ತೊಂದರೆಗಳ ನಿವಾರಣೆಗೆ ಆಗಮಿಸುತ್ತಿದ್ದರು. ತಾಯಿ ಭುವನೇಶ್ವರಿ ದೇವಿ ಅತ್ಯಂತ ಸಾಧುವೂ ದೈವಭಕ್ತಿಯೂ ಉಳ್ಳ ಹೆಣ್ಣುಮಗಳು. ಆಕೆ ಮಗನನ್ನು ಬೆಳೆಸುವಾಗ ನಮ್ಮ ನಾಡನ್ನಾಳಿದ ವೀರರ ಧೀರರ ಚರಿತೆಯನ್ನು ಹೇಳುತ್ತಾ ಆತನಲ್ಲಿ ಉದಾತ್ತ ಭಾವನೆಗಳ ಚಿಂತನೆಗಳನ್ನು ದೇಶಭಕ್ತಿಯ ವಿಚಾರಗಳನ್ನು ಬಿತ್ತುತ್ತಿದ್ದಳು.



ಉತ್ತಮ ಗ್ರಹಿಕೆ ಮತ್ತು ಜಾಣ್ಮೆಯನ್ನು ಹೊಂದಿದ್ದ ನರೇಂದ್ರರು ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡಿದರು. ಮೊದಲು ಮೆಟ್ರೋಪಾಲಿಟನ್ ಸಂಸ್ಥೆಯಲ್ಲಿ ಮತ್ತು ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ಅವರು ಕಾಲೇಜಿನಿಂದ ಪದವಿ ಪಡೆದರಲ್ಲದೇ ವಿವಿಧ ವಿಷಯಗಳ ಬಗ್ಗೆ ಅಪಾರ ಜ್ಞಾನವನ್ನು ಗಳಿಸಿದರು. ಅವರು ಕ್ರೀಡೆ, ಜಿಮ್ನಾಸ್ಟಿಕ್ಸ್, ಕುಸ್ತಿ ಮತ್ತು ದೇಹದಾರ್ಢ್ಯದಲ್ಲಿ ಸಕ್ರಿಯರಾಗಿದ್ದರು. ಅವರು ಓರ್ವ ಅತ್ಯುತ್ತಮ ಓದುಗ ಕೂಡ. ಅತಿಶಯೋಕ್ತಿಯಾಗಿ ಹೇಳುವುದಾದರೆ ಸೂರ್ಯನ ಕೆಳಗೆ ಇರುವ ಬಹುತೇಕ ಎಲ್ಲವನ್ನೂ ಅವರು ಓದಿದರು. ಒಂದು ಕಡೆ ಭಗವದ್ಗೀತೆ ಮತ್ತು ಉಪನಿಷತ್ತುಗಳಂತಹ ಹಿಂದೂ ಧರ್ಮಗ್ರಂಥಗಳನ್ನು ಪರಿಶೀಲಿಸಿದ ಅವರ ಗ್ರಹಣ ಶಕ್ತಿ ಹೇಗಿತ್ತೆಂದರೆ ಅವರು ಪುಸ್ತಕವನ್ನು ಅಕ್ಷರಕ್ಷರ,ಪುಟ ಪುಟವಾಗಿ ಓದುತ್ತಿರಲಿಲ್ಲ. ಒಂದಿಡೀ ಪುಸ್ತಕದ ಹೂರಣವನ್ನು ಅವರು ಕೆಲವೇ ನಿಮಿಷಗಳಲ್ಲಿ ಓದಬಲ್ಲವರಾಗಿದ್ದರು. ಅವರು ಡೇವಿಡ್ ಹ್ಯೂಮ್, ಜೋಹಾನ್ ಗಾಟ್ಲೀಬ್ ಫಿಚ್ಟೆ ಮತ್ತು ಹರ್ಬರ್ಟ್ ಸ್ಪೆನ್ಸರ್ ಅವರಿಂದ ಪಾಶ್ಚಿಮಾತ್ಯ ತತ್ವಶಾಸ್ತ್ರ, ಇತಿಹಾಸ ಮತ್ತು ಆಧ್ಯಾತ್ಮಿಕತೆಯನ್ನು ಅಧ್ಯಯನ ಮಾಡಿದರು.

ಇಷ್ಟೆಲ್ಲಾ ಓದಿದ ಸ್ವಾಮಿ ವಿವೇಕಾನಂದರು ಲೌಕಿಕದೆಡೆ ಕೊಂಚ ನಿರಾಸಕ್ತಿಯನ್ನು ಬೆಳೆಸಿಕೊಂಡಿದ್ದರು. ಮುಂದೆ ವಿವೇಕಾನಂದರು ತರುಣಾವಸ್ಥೆಗೆ ಬಂದಾಗ ವಿಶ್ವನಾಥ ದತ್ತರ ಹಠಾತ್ ನಿಧನದ ನಂತರದ ಮನೆಯ ದುಸ್ತರ ಪರಿಸ್ಥಿತಿಗಳು ಅವರಿಗೆ ಲೌಕಿಕ ಬದುಕಿನ ಸತ್ಯಗಳ ಅನಾವರಣ ಮಾಡಿದ್ದವು.1884 ರಲ್ಲಿ ತನ್ನ ತಂದೆಯ ಮರಣದ ನಂತರ ತನ್ನ ತಾಯಿ ಮತ್ತು ಕಿರಿಯ ಸಹೋದರರನ್ನು ಸಲಹ ಬೇಕಾಗಿದ್ದರಿಂದ ಅವರ ಕುಟುಂಬ ಸಾಕಷ್ಟ ಆರ್ಥಿಕ ಸಂಕಷ್ಟಕ್ಕೆ ಒಳಗಾಯಿತು. ದೇವರ ಮೊರೆ ಕೂಡ ಹೋದರು. ಒಮ್ಮೆ ದೇವಿಯನ್ನು ಎದುರಿಸಿದ ಅವರು ಹಣ ಮತ್ತು ಸಂಪತ್ತನ್ನು ಕೇಳಲು ಸಾಧ್ಯವಾಗಲಿಲ್ಲ, ಬದಲಿಗೆ ಅವರು ‘ವಿವೇಕ’ (ಆತ್ಮಸಾಕ್ಷಿ) ಮತ್ತು ‘ವೈರಾಗ್ಯ’ (ಏಕಾಂತ) ಕೇಳಿದರು. ಆ ದಿನವು ನರೇಂದ್ರನಾಥರ ಸಂಪೂರ್ಣ ಆಧ್ಯಾತ್ಮಿಕ ಜಾಗೃತಿಯನ್ನು ಗುರುತಿಸಿತು ಮತ್ತು ಅವರು ತಪಸ್ವಿ ಜೀವನ ವಿಧಾನಕ್ಕೆ ಆಕರ್ಷಿತರಾದರು.

ಅಧ್ಯಯನ ಜ್ಞಾನವು ಅವರಿಗೆ ದೇವರ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡಿತು ಮತ್ತು ಸ್ವಲ್ಪ ಸಮಯದವರೆಗೆ ಅವರು ಅಜ್ಞೇಯತಾವಾದದಲ್ಲಿ ನಂಬಿಕೆ ಇರಿಸಿದ್ದರು. ಆದರೂ ತಾಯಿಯ ಧಾರ್ಮಿಕ ಪ್ರಜ್ಞೆಯ ಅಡಿಯಲ್ಲಿ ಬೆಳೆದ ಅವರು ಪರಮಾತ್ಮನ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಾಗಲಿಲ್ಲ. ಅವರು ಕೆಲವು ಕಾಲ ಕೇಶವಚಂದ್ರಸೇನರ ನೇತೃತ್ವದ ಬ್ರಹ್ಮೋ ಆಂದೋಲನದೊಂದಿಗೆ ಸಂಬಂಧ ಹೊಂದಿದ್ದರು. ಬ್ರಹ್ಮ ಸಮಾಜವು ಮೂರ್ತಿಪೂಜೆ, ಮೂಢನಂಬಿಕೆಗಳಿಂದ ಕೂಡಿದ ಹಿಂದೂ ಧರ್ಮಕ್ಕಿಂತ ಭಿನ್ನವಾಗಿ ಒಬ್ಬ ದೇವರನ್ನು ಗುರುತಿಸಿದೆ. ಅವರ ಮನಸ್ಸಿನಲ್ಲಿ ದೇವರ ಅಸ್ತಿತ್ವದ ಬಗ್ಗೆ ಇದ್ದ ತಾತ್ವಿಕ ಪ್ರಶ್ನೆಗಳಿಗೆ ಉತ್ತರವಿಲ್ಲ. ಈ ಆಧ್ಯಾತ್ಮಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನರೇಂದ್ರರು ಸ್ಕಾಟಿಷ್ ಚರ್ಚ್ ಕಾಲೇಜಿನ ಪ್ರಾಂಶುಪಾಲರಾದ ವಿಲಿಯಂ ಹ್ಯಾಸ್ಟಿ ಅವರಿಂದ ಶ್ರೀ ರಾಮಕೃಷ್ಣರ ಬಗ್ಗೆ ಮೊದಲು ಕೇಳಿದರು.




ಇದಕ್ಕೂ ಮೊದಲು, ದೇವರ ಬಗೆಗಿನ ಅವರ ಬೌದ್ಧಿಕ ಅನ್ವೇಷಣೆಯನ್ನು ಪೂರೈಸಲು, ನರೇಂದ್ರನಾಥ್ ಅವರು ಎಲ್ಲಾ ಧರ್ಮಗಳ ಪ್ರಮುಖ ಆಧ್ಯಾತ್ಮಿಕ ನಾಯಕರನ್ನು ಭೇಟಿ ಮಾಡಿದರು, “ನೀವು ದೇವರನ್ನು ನೋಡಿದ್ದೀರಾ?” ಪ್ರತಿ ಬಾರಿಯೂ ಸಮಾಧಾನಕರ ಉತ್ತರವಿಲ್ಲದೇ ಹೊರಟು ಹೋಗುತ್ತಿದ್ದ. ದಕ್ಷಿಣೇಶ್ವರ ಕಾಳಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ರಾಮಕೃಷ್ಣರ ನಿವಾಸದಲ್ಲಿ ಅವರು ಇದೇ ಪ್ರಶ್ನೆಯನ್ನು ಮುಂದಿಟ್ಟರು. ಒಂದು ಕ್ಷಣವೂ ಹಿಂಜರಿಕೆಯಿಲ್ಲದೆ ಶ್ರೀ ರಾಮಕೃಷ್ಣರು ಉತ್ತರಿಸಿದರು: “ಹೌದು, ನಾನು ಹೊಂದಿದ್ದೇನೆ. ನಾನು ನಿನ್ನನ್ನು ನೋಡುವಷ್ಟೇ ಸ್ಪಷ್ಟವಾಗಿ ದೇವರನ್ನು ನೋಡುತ್ತೇನೆ, ಆದರೆ ಹೆಚ್ಚು ಆಳವಾದ ಅರ್ಥದಲ್ಲಿ ಮಾತ್ರ.” ಆರಂಭದಲ್ಲಿ ರಾಮಕೃಷ್ಣರ ಸರಳತೆಯಿಂದ ಪ್ರಭಾವಿತರಾಗದ ವಿವೇಕಾನಂದರು ರಾಮಕೃಷ್ಣರ ಉತ್ತರದಿಂದ ಬೆರಗಾದರು. ರಾಮಕೃಷ್ಣರು ತಮ್ಮ ತಾಳ್ಮೆ ಮತ್ತು ಪ್ರೀತಿಯಿಂದ ಈ ನಿರೀಶ್ವರವಾದದ ಯುವಕನನ್ನು ಕ್ರಮೇಣ ಗೆದ್ದರು. ನರೇಂದ್ರನಾಥರು ದಕ್ಷಿಣೇಶ್ವರಕ್ಕೆ ಭೇಟಿ ನೀಡಿದಷ್ಟೂ ಅವರ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿತ್ತು

1885 ರ ಮಧ್ಯದಲ್ಲಿ, ಗಂಟಲು ಕ್ಯಾನ್ಸರನಿಂದ ಬಳಲುತ್ತಿದ್ದ ರಾಮಕೃಷ್ಣ ಪರಮಹಂಸರು ತೀವ್ರವಾಗಿ ಅನಾರೋಗ್ಯಕ್ಕೆ ಒಳಗಾದರು. ಸೆಪ್ಟೆಂಬರ್ 1885 ರಲ್ಲಿ ಶ್ರೀ ರಾಮಕೃಷ್ಣರನ್ನು ಕಲ್ಕತ್ತಾದ ಶ್ಯಾಮಪುಕೂರಗೆ ಸ್ಥಳಾಂತರಿಸಲಾಯಿತು. ಇಲ್ಲಿ ನರೇಂದ್ರರು ಶ್ರೀರಾಮಕೃಷ್ಣರ ಕಟ್ಟಾ ಅನುಯಾಯಿಗಳಾಗಿದ್ದ ಯುವಜನರ ಗುಂಪನ್ನು ರಚಿಸಿದರು ಮತ್ತು ತಮ್ಮ ಗುರುಗಳಿಗೆ ಶ್ರದ್ಧಾಪೂರ್ವಕ ಕಾಳಜಿಯಿಂದ ಶುಶ್ರೂಷೆ ಮಾಡಿದರು. 16 ಆಗಸ್ಟ್ 1886 ರಂದು ಶ್ರೀ ರಾಮಕೃಷ್ಣರು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದರು.

ಶ್ರೀ ರಾಮಕೃಷ್ಣರ ನಿಧನದ ನಂತರ, ನರೇಂದ್ರನಾಥರು ಸೇರಿದಂತೆ ಅವರ ಸುಮಾರು ಹದಿನೈದು ಶಿಷ್ಯರು ಉತ್ತರ ಕಲ್ಕತ್ತಾದ ಬಾರಾನಗರದಲ್ಲಿ ಶಿಥಿಲಗೊಂಡ ಕಟ್ಟಡದಲ್ಲಿ ಒಟ್ಟಿಗೆ ವಾಸಿಸಲು ಪ್ರಾರಂಭಿಸಿದರು, ಇದನ್ನು ರಾಮಕೃಷ್ಣ ಮಠ ಎಂದು ಹೆಸರಿಸಲಾಯಿತು ಇದುವೇ ರಾಮಕೃಷ್ಣರ ಸನ್ಯಾಸಿಗಳ ವಾಸಸ್ಥಳ. 1887 ರಲ್ಲಿ ಅವರು ಔಪಚಾರಿಕವಾಗಿ ಪ್ರಪಂಚದ ಎಲ್ಲಾ ಸಂಬಂಧಗಳನ್ನು ತ್ಯಜಿಸಿದರು ಮತ್ತು ವಿವೇಕಾನಂದರಾಗಿ ಹೊರಹೊಮ್ಮಿದರು. ವಿವೇಕಾನಂದ ಅಂದರೆ “ವಿವೇಚನಾಶೀಲ ಬುದ್ಧಿವಂತಿಕೆಯ ಆನಂದ”.

ಪವಿತ್ರ ಭಿಕ್ಷಾಟನೆ ಅಥವಾ ‘ಮಧುಕರಿ’, ಯೋಗ ಮತ್ತು ಧ್ಯಾನದ ಸಮಯದಲ್ಲಿ ಪೋಷಕರು ಸ್ವಯಂಪ್ರೇರಣೆಯಿಂದ ದಾನ ಮಾಡಿದ ಭಿಕ್ಷೆಯಿಂದ ರಾಮಕೃಷ್ಣ ಮಠದ ಸಹೋದರತ್ವವು ವಾಸಿಸುತ್ತಿತ್ತು. ವಿವೇಕಾನಂದರು 1886ರಲ್ಲಿ ಮಠವನ್ನು ತೊರೆದು ‘ಪರಿವ್ರಾಜಕ’ರಾಗಿ ಕಾಲ್ನಡಿಗೆಯಲ್ಲಿ ಭಾರತ ಪ್ರವಾಸ ಕೈಗೊಂಡರು. ಅವರು ದೇಶದಾದ್ಯಂತ ಪ್ರಯಾಣಿಸಿದರು, ಅವರ ಸಂಪರ್ಕಕ್ಕೆ ಬಂದ ಜನರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳನ್ನು ಗಮನಿಸುತ್ತಿದ್ದ ಅವರು ಸಾಮಾನ್ಯ ಜನರು ಎದುರಿಸುತ್ತಿರುವ ಜೀವನದ ಪ್ರತಿಕೂಲತೆಗಳನ್ನು, ಅವರ ಕಾಯಿಲೆಗಳನ್ನು ವೀಕ್ಷಿಸಿದರು ಮತ್ತು ಈ ದುಃಖಗಳಿಗೆ ಪರಿಹಾರವನ್ನು ತರಲು ತಮ್ಮ ಜೀವನವನ್ನು ಮುಡಿಪಾಗಿಡಲು ಪ್ರತಿಜ್ಞೆ ಮಾಡಿದರು.

ಪರಿವ್ರಾಜಕರಾಗಿ ಅಲೆದಾಡುವ ಸಮಯದಲ್ಲಿ, ಅವರು 1893 ರಲ್ಲಿ ಅಮೆರಿಕದ ಚಿಕಾಗೋದಲ್ಲಿ ವಿಶ್ವ ಧರ್ಮ ಸಂಸತ್ತಿನ ಬಗ್ಗೆ ತಿಳಿದುಕೊಂಡವರು ಆ ಸಭೆಗೆ ಹಾಜರಾಗಲು ಉತ್ಸುಕರಾಗಿದ್ದರು, ಭಾರತ, ಹಿಂದೂ ಧರ್ಮ ಮತ್ತು ಅವರ ಗುರು ಶ್ರೀ ರಾಮಕೃಷ್ಣರ ತತ್ವಗಳನ್ನು ಪ್ರತಿನಿಧಿಸಿದರು.. ಅವರು ಭಾರತದ ದಕ್ಷಿಣದ ತುದಿಯಾದ ಕನ್ಯಾಕುಮಾರಿಯ ಬಂಡೆಗಳ ಮೇಲೆ ಧ್ಯಾನ ಮಾಡುತ್ತಿದ್ದಾಗ ಅವರು ತಮ್ಮ ಇಚ್ಛೆಯ ಪ್ರತಿಪಾದನೆಯನ್ನು ಕಂಡುಕೊಂಡ ಅವರು ಮದರಾಸಿನಲ್ಲಿ ಅವರ ಶಿಷ್ಯರಿಂದ ವಿದೇಶ ಯಾತ್ರೆಗೆ ಹೋಗಲು ಹಣವನ್ನು ಸಂಗ್ರಹ ಮಾಡಿಸಿದರು ಮತ್ತು ಖೇತ್ರಿಯ ರಾಜರಾದ.. ಮಹಾರಾಜ ಅಜಿತ್ ಸಿಂಗ್ ಅವರೊಂದಿಗೆ ವಿವೇಕಾನಂದರು ಮೇ 31, 1893 ರಂದು ಮುಂಬೈಯಿಂದ ಚಿಕಾಗೋಗೆ ತೆರಳಿದರು.




ಅವರು ಚಿಕಾಗೋಗೆ ಹೋಗುವ ದಾರಿಯಲ್ಲಿ ದುಸ್ತರ ಕಷ್ಟಗಳನ್ನು ಎದುರಿಸಿದರು, ಆದರೆ ಅವರ ಆತ್ಮಗಳು ಎಂದಿನಂತೆ ಅದಮ್ಯವಾಗಿ ಉಳಿಯಿತು. 11 ಸೆಪ್ಟೆಂಬರ್ 1893 ರಂದು ವಿಶ್ವಧರ್ಮ ಸಮ್ಮೇಳನದಲ್ಲಿ ಅವರು ವೇದಿಕೆಯನ್ನು ಪಡೆದರು ಮತ್ತು “ಅಮೆರಿಕದ ನನ್ನ ಸಹೋದರರು ಮತ್ತು ಸಹೋದರಿಯರೇ” ಎಂಬ ಆರಂಭಿಕ ಸಾಲಿನಿಂದಲೆ ಎಲ್ಲರನ್ನು ದಿಗ್ಭ್ರಮೆಗೊಳಿಸಿದರು. ಆರಂಭದ ಪದಗುಚ್ಛಕ್ಕೆ ಸಭಿಕರಿಂದ ಚಪ್ಪಾಳೆ ತಟ್ಟಿದರು. ನಂತರ ಅವರು ವೇದಾಂತದ ತತ್ವಗಳನ್ನು ಮತ್ತು ಅವುಗಳ ಆಧ್ಯಾತ್ಮಿಕ ಮಹತ್ವವನ್ನು ವಿವರಿಸಿದರು, ಹಿಂದೂ ಧರ್ಮವನ್ನು ವಿಶ್ವ ಧರ್ಮಗಳ ನಕ್ಷೆಯಲ್ಲಿ ಇರಿಸಿದರು.

ಅವರು ಮುಂದಿನ ಎರಡೂವರೆ ವರ್ಷಗಳನ್ನು ಕಾಲ ಅಮೇರಿಕಾದ ವಿವಿಧೆಡೆ ಭಾರತೀಯ ಸಂಸ್ಕೃತಿ, ಇತಿಹಾಸಗಳ ಕುರಿತು ಪ್ರವಚನಗಳನ್ನು ನೀಡುತ್ತಾ ಕಳೆದರು ಮತ್ತು 1894 ರಲ್ಲಿ ನ್ಯೂಯಾರ್ಕ್ ನಲ್ಲಿ ವೇದಾಂತ ಸೊಸೈಟಿಯನ್ನು ಸ್ಥಾಪಿಸಿದರು. ಅವರು ಪಶ್ಚಿಮ ಜಗತ್ತಿಗೆ ವೇದಾಂತ ಮತ್ತು ಹಿಂದೂ ಆಧ್ಯಾತ್ಮಿಕತೆಯ ತತ್ವಗಳನ್ನು ಬೋಧಿಸಲು ಯುನೈಟೆಡ್ ಕಿಂಗ್‌ಡಮ್‌ಗೆ ಪ್ರಯಾಣಿಸಿದರು.

ವಿವೇಕಾನಂದರು 1897 ರಲ್ಲಿ ಭಾರತಕ್ಕೆ ಮರಳಿದರು, ಸಾಮಾನ್ಯ ಮತ್ತು ರಾಜಮನೆತನದವರ ಆತ್ಮೀಯ ಸ್ವಾಗತದ ನಡುವೆ ಅವರು ದೇಶಾದ್ಯಂತ ಉಪನ್ಯಾಸಗಳ ಸರಣಿಯ ನಂತರ ಕಲ್ಕತ್ತಾವನ್ನು ತಲುಪಿದರು ಮತ್ತು ಮೇ 1, 1897 ರಂದು ಕಲ್ಕತ್ತಾ ಬಳಿಯ ಬೇಲೂರು ಮಠದಲ್ಲಿ ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಿದರು. ರಾಮಕೃಷ್ಣ ಮಿಷನ್‌ನ ಗುರಿಗಳು ಕರ್ಮ ಯೋಗದ ಆದರ್ಶಗಳನ್ನು ಆಧರಿಸಿವೆ ಮತ್ತು ದೇಶದ ಬಡ ಮತ್ತು ಸಂಕಷ್ಟದಲ್ಲಿರುವ ಜನರಿಗೆ ಸೇವೆ ಸಲ್ಲಿಸುವುದು ಇದರ ಪ್ರಾಥಮಿಕ ಉದ್ದೇಶವಾಗಿತ್ತು. ರಾಮಕೃಷ್ಣ ಮಿಷನ್ ವಿವಿಧ ರೀತಿಯ ಸಾಮಾಜಿಕ ಸೇವೆಯನ್ನು ಕೈಗೊಂಡಿದೆ, ಉದಾಹರಣೆಗೆ ಶಾಲೆಗಳು, ಕಾಲೇಜುಗಳು, ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸುವುದು ಮತ್ತು ನಡೆಸುವುದು, ಸಮ್ಮೇಳನ, ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳ ಮೂಲಕ ವೇದಾಂತದ ಪ್ರಾಯೋಗಿಕ ತತ್ವಗಳ ಪ್ರಚಾರ, ದೇಶಾದ್ಯಂತ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಪ್ರಾರಂಭಿಸುವುದು. ರಾಜಯೋಗ, ಕರ್ಮ ಯೋಗ, ಭಕ್ತಿ ಯೋಗ ಮತ್ತು ಜ್ಞಾನ ಯೋಗಗಳ ಕುರಿತಾದ ಕೃತಿಗಳನ್ನು ಅವರು ರಚಿಸಿದರು

ಅವರ ಧಾರ್ಮಿಕ ಆತ್ಮಸಾಕ್ಷಿಯು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಬೋಧನೆಗಳು ಮತ್ತು ಅದ್ವೈತ ವೇದಾಂತ ತತ್ವಶಾಸ್ತ್ರದ ಸಂಯೋಜನೆಯಾಗಿದೆ. ನಿಸ್ವಾರ್ಥ ಕೆಲಸ, ಪೂಜೆ, ಮಾನಸಿಕ ಶಿಸ್ತು ಕೈಗೊಳ್ಳುವ ಮೂಲಕ ಆತ್ಮದ ದಿವ್ಯತೆಯನ್ನು ಸಾಧಿಸುವಂತೆ ಯುವ ಜನಾಂಗಕ್ಕೆ ಅವರು ನಿರ್ದೇಶನ ನೀಡಿದರು. ವಿವೇಕಾನಂದರ ಪ್ರಕಾರ, ಆತ್ಮದ ಸ್ವಾತಂತ್ರ್ಯವನ್ನು ಸಾಧಿಸುವುದು ವ್ಯಕ್ತಿಯೋರ್ವನ ಅಂತಿಮ ಗುರಿಯಾಗಿದೆ ಮತ್ತು ಅದು ಒಬ್ಬರ ಧರ್ಮದ ಸಂಪೂರ್ಣತೆಯನ್ನು ಒಳಗೊಳ್ಳುತ್ತದೆ.

ಸ್ವಾಮಿ ವಿವೇಕಾನಂದರು ಪ್ರಮುಖ ರಾಷ್ಟ್ರೀಯತಾವಾದಿಯಾಗಿದ್ದರು. ಮತ್ತು ಅವರ ಮನಸ್ಸಿನಲ್ಲಿ ತಮ್ಮ ದೇಶವಾಸಿಗಳ ಒಟ್ಟಾರೆ ಕಲ್ಯಾಣವನ್ನು ಹೊಂದಿದ್ದರು. “ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿಯನ್ನು ತಲುಪುವವರೆಗೆ ನಿಲ್ಲಬೇಡಿ” ಎಂದು ಅವರು ತಮ್ಮ ದೇಶವಾಸಿಗಳನ್ನು ಒತ್ತಾಯಿಸಿದರು.




ಸ್ವಾಮಿ ವಿವೇಕಾನಂದರು ಅಲ್ಪಾಯುಷಿಗಳು. ಜುಲೈ 4, 1902 ರಂದು, ಅವರು ಬೇಲೂರು ಮಠದಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕೃತ ವ್ಯಾಕರಣ ಪಾಠ ಮಾಡಿದ ಅವರು ಸಂಜೆ ತಮ್ಮ ಕೋಣೆಗೆ ಮರಳಿದರು ಮತ್ತು ಸುಮಾರು 9 ಗಂಟೆಗೆ ಧ್ಯಾನದ ಸಮಯದಲ್ಲಿ ನಿಧನರಾದರು. ಅವರು ‘ಮಹಾಸಮಾಧಿ’ ಪಡೆದರು ಮತ್ತು ಮಹಾನ್ ಸಂತನನ್ನು ಗಂಗಾ ನದಿಯ ದಡದಲ್ಲಿ ದಹಿಸಲಾಯಿತು ಎಂದು ಹೇಳಲಾಗುತ್ತದೆ.

ಸ್ವಾಮಿ ವಿವೇಕಾನಂದರು ಒಂದು ರಾಷ್ಟ್ರವಾಗಿ ಭಾರತದ ಏಕತೆಯ ನಿಜವಾದ ಅಡಿಪಾಯವನ್ನು ಜಗತ್ತಿಗೆ ಬಹಿರಂಗಪಡಿಸಿದರು. ಅಂತಹ ವಿಶಾಲವಾದ ವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರವನ್ನು ಮಾನವೀಯತೆ ಮತ್ತು ಸಹೋದರತ್ವದ ಭಾವನೆಯಿಂದ ಹೇಗೆ ಬಂಧಿಸಬಹುದು ಎಂಬುದನ್ನು ಅವರು ಕಲಿಸಿದರು. ವಿವೇಕಾನಂದರು ಪಾಶ್ಚಿಮಾತ್ಯ ಸಂಸ್ಕೃತಿಯ ನ್ಯೂನತೆಗಳ ಅಂಶಗಳನ್ನು ಮತ್ತು ಅವುಗಳನ್ನು ನಿವಾರಿಸಲು ಭಾರತದ ಕೊಡುಗೆಯನ್ನು ಒತ್ತಿ ಹೇಳಿದ್ದಾರೆ.

ನೇತಾಜಿ ಸುಭಾಷ್ ಚಂದ್ರ ಬೋಸ್ ಒಮ್ಮೆ ಹೇಳಿದರು: “ಸ್ವಾಮಿ ವಿವೇಕಾನಂದರು ಪೂರ್ವ ಮತ್ತು ಪಶ್ಚಿಮ, ಧರ್ಮ ಮತ್ತು ವಿಜ್ಞಾನ, ಹಿಂದಿನ ಮತ್ತು ವರ್ತಮಾನವನ್ನು ಸಮನ್ವಯಗೊಳಿಸಿದವರು ಮತ್ತು ಅದಕ್ಕಾಗಿಯೇ ಅವರು ಶ್ರೇಷ್ಠರಾಗಿದ್ದಾರೆ. ನಮ್ಮ ದೇಶವಾಸಿಗಳು ಅವರ ಅಭೂತಪೂರ್ವ ಸ್ವಾಭಿಮಾನ, ಸ್ವಾವಲಂಬನೆ ಮತ್ತು ಸ್ವಾವಲಂಬನೆಯನ್ನು ಗಳಿಸಿದ್ದಾರೆ. ಬೋಧನೆಗಳು.” ವಿವೇಕಾನಂದರು ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಯ ನಡುವೆ ಸೇತುವೆಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದರು. ಅವರು ಪಾಶ್ಚಿಮಾತ್ಯ ಜನರಿಗೆ ಹಿಂದೂ ಧರ್ಮಗ್ರಂಥಗಳು, ತತ್ವಶಾಸ್ತ್ರ ಮತ್ತು ಜೀವನ ವಿಧಾನವನ್ನು ಅರ್ಥೈಸಿದರು. ಬಡತನ ಮತ್ತು ಹಿಂದುಳಿದಿರುವಿಕೆಯ ನಡುವೆಯೂ ಅವರು ಅವರಿಗೆ ಅರಿವನ್ನು ಮೂಡಿಸಿದರು. ವಿಶ್ವ ಸಂಸ್ಕೃತಿಗೆ ಭಾರತವು ದೊಡ್ಡ ಕೊಡುಗೆಯನ್ನು ನೀಡಿದೆ. ಪ್ರಪಂಚದ ಇತರ ಭಾಗಗಳಿಂದ ಭಾರತದ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಕೊನೆಗೊಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.

ಅಂತೆಯೇ ಭಾರತದ ಘನ ಸರ್ಕಾರವು ಭಾರತವಷ್ಟೇ ಅಲ್ಲ ಇಡೀ ವಿಶ್ವದ ಯುವ ಜನಾಂಗಕ್ಕೆ ತನ್ನ ಅತ್ಯುತ್ತಮ ಸಂದೇಶಗಳನ್ನು ಕೊಟ್ಟ, ನುಡಿದಂತೆ ನಡೆದ, ವಿಶ್ವದ ಎಲ್ಲೆಡೆ ಭಾರತದ ಕೀರ್ತಿಯನ್ನು ಪಸರಿಸಿದ ಭಾರತದ ಹಿಂದೂ ಪರಂಪರೆಯ ಆಳ ಅಗಲ ಹಿರಿಮೆ ಗರಿಮೆಗಳನ್ನು ಜಗತ್ತಿಗೆ ತೋರ್ಪಡಿಸಿದ ಸಿಡಿಲ ಸನ್ಯಾಸಿ ಎಂದೇ ಹೆಸರಾದ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನ ವನ್ನಾಗಿ ಆಚರಿಸಲಾಗುತ್ತಿದೆ. ಅವರ ಆದರ್ಶಗಳನ್ನು ನಮ್ಮ ಬಾಳಿನಲ್ಲಿ ಪಾಲಿಸುವ ಪ್ರತಿಜ್ಞೆಯನ್ನು ಈ ಯುವ ದಿನದಂದು ನಾವೆಲ್ಲರೂ ಕೈಗೊಂಡು ಅದರಂತೆಯೇ ನಡೆಯೋಣ ಎಂಬ ಆಶಯದೊಂದಿಗೆ..

# ಅರ್ಥಪೂರ್ಣ ಗಣರಾಜ್ಯೋತ್ಸವ ಆಚರಣೆಗೆ ಡಿಸಿ ಸೂಚನೆ

**ಉದಯರಶ್ಮಿ ನ್ಯೂಸ್**




ವಿಜಯಪುರ: ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 26 ರಂದು ಗಣ–ರಾಜ್ಯೋತ್ಸವ ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ದತೆಗೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಟಿ.ಭೂಬಾಲನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಗಣರಾಜ್ಯೋತ್ಸವ ಆಚ–ರಣೆಯ ಕುರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದ ಅವರು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಯಾವುದೇ ಗೊಂದಲ ಮಾಡಿಕೊಳ್ಳದೇ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.

ಅಧಿಕಾರಿಗಳು ತಮಗೆ ವಹಿಸಿದ ಎಲ್ಲ ಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸಿ, ವಹಿಸಿದ ಜವಾಬ್ದಾರಿ ಕೈಗೊಂಡು ಯಶಸ್ವಿಗೊಳಿಸಬೇಕು. ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಿಸಿ,ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ಕ್ರಮವಹಿಸಬೇಕು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಗೆ ಉಪ ನಿರ್ದೇಶಕರು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವೇದಿಕೆ ಸಿದ್ಧತೆ,ಆಕರ್ಷಕ ಪಥಸಂಚಲನ, ಸನ್ಮಾನ,ಅಲ್ಪೋಪಹಾರ ವ್ಯವಸ್ಥೆ ಅಚ್ಚುಕಟ್ಟು ವ್ಯವಸ್ಥೆಗೆ ಕ್ರಮಕೈಗೊಳ್ಳಬೇಕು. ಭದ್ರತಾ ವ್ಯವಸ್ಥೆ,ಕುಡಿಯುವ ನೀರು,ಸ್ವಚ್ಛತೆ, ದೀಪಾಲಂಕಾರ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಕಾರ್ಯಕ್ರಮಕ್ಕೆ ನಿಗದಿತ ಸಮಯದಲ್ಲಿ ಎಲ್ಲ ಅಧಿಕಾರಿಗಳು ಹಾಜರಿರಬೇಕು. ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಅಂದು ಸಂಜೆ ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿ, ಪ್ಲಾಸ್ಟಿಕ್ ಧ್ವಜ ಮಾರಾಟವಾಗದಂತೆ ನೋಡಿಕೊಳ್ಳಬೇಕು. ಸಂಬಂಧಿಸಿದ ಅಧಿಕಾ–ರಿಗಳು ತಮಗೆ ವಹಿಸಿದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ತಿಳಿಸಿದ ಅವರು, ಗಣರಾಜ್ಯೋತ್ಸವದ ಸಂದೇಶ ಸಿದ್ದತೆಗೆ ಎಲ್ಲಾ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿ ನೀಡುವಂತೆ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿ ಋಷಿಕೇಶ ಸೋನಾವಣೆ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಹುಲ್ ಶಿಂಧೆ,ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಬಸವಣೆಪ್ಪ ಕಲಶೆಟ್ಟಿ, ಮಹಾನಗರ ಪಾಲಿಕೆ ಆಯುಕ್ತರಾದ ಬದ್ರುದ್ದಿನ ಸೌದಾಗರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೆ.ಕೆ.ಚವ್ಹಾಣ,ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಪುಂಡಲಿಕ ಮಾನವರ, ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಪತ್ರಾಧಿಕಾರಿ ರಾಮಣ್ಣ ಅಥಣಿ,ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಭಜಂತ್ರಿ,ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ರಾಜಶೇಖರ ದೈವಾಡಿ,ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ್ ವಾಲೀಕಾರ್, ಅಡಿವೆಪ್ಪ ಸಾಲಗಲ್,ಭೀಮರಾಯ ಜಿಗಜಿಣಗಿ, ಅಭಿಷೇಕ ಚಕ್ರವರ್ತಿ,ಪೀಟರ್ ಅಲೆಕ್ಸಾಂಡರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಂಸ್ಕೃತಿ, ಸಂಸ್ಕಾರ ಅಳವಡಿಸಿಕೊಳ್ಳಿ :ಪ್ರಭುಶ್ರೀ

**ಉದಯರಶ್ಮಿ ನ್ಯೂಸ್**



ಚಿಮ್ಮಡ: ನಿತ್ಯ ಸಮಾಜದಲ್ಲಿ ನಾವು ಉತ್ತಮ ಬದುಕು ಕಂಡುಕೊಳ್ಳಬೇಕಾದರೆ ಸಂಸ್ಕೃತಿ, ಸಂಸ್ಕಾರ ಜೀವನದಲ್ಲಿ ಅಳವಡಿಸಿಕೊಳ್ಳುವ ಜೊತೆಗೆ ನಮ್ಮ ಮಕ್ಕಳಿಗೂ ಕಲಿಸಬೇಕೆಂದು ಸ್ಥಳಿಯ ವಿರಕ್ತಮಠದ ಪ್ರಭು ಸ್ವಾಮಿಗಳು ಹೇಳಿದರು.

ಗ್ರಾಮದ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಪ್ರಭುಲಿಂಗೇಶ್ವರ ಪಲ್ಲಕ್ಕಿ ಉತ್ಸವ ಹಾಗೂ ಶ್ರೀ ಪ್ರಭು ಮಹಾಸ್ವಾಮಿಗಳ 53ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಗ್ರಾಮದ ವಿವಿಧ ಸಮುದಾಯಗಳ ಪ್ರಮುಖರಿಂದ ಗೌರವ ಸ್ವೀಕರಿಸಿ ಮಾತನಾಡಿದ ಅವರು, ಬೆಳಗುತ್ತಿರುವ ದೀಪಗಳನ್ನು ಆರಿಸಿ ಜನ್ಮದಿನ ಆಚ–ರಿಸುವ ಸಂಸ್ಕತಿ ಪಾಶ್ಚಾತರದ್ದು. ಇನ್ನೊಬ್ಬರ ಜೀವನದಲ್ಲಿ ಬೆಳಗುವ ದೀಪವಾಗುವ ಕಾರ್ಯ ಮಾಡುವುದು ಭಾರತೀಯ ಸಂಸ್ಕೃತಿ. ನಮ್ಮ ಪರಂಪರೆಯನ್ನು ನಮ್ಮ ಮಕ್ಕಳಿಗೆ ಕಲಿಸಬೇಕಾಗಿದೆ. ಆ ಕಾರಣ–ಕ್ಕೆ ಶ್ರೀಮಠದ ಭಕ್ತ ಮಂಡಳಿ ಈ ಜನ್ಮ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಗ್ರಾ.ಪಂ ಮಾಜಿ ಅಧ್ಯಕ್ಷ ಪರಪ್ಪಾ ಪಾಲಭಾವಿ ಮಾತನಾಡಿ, ಭಾರತೀಯ ಸಂಸ್ಕೃತಿ, ಸಂಸ್ಕಾರ ಮಠಗಳಿಂದ ದೊರೆಯುತಿದ್ದು ಅದನ್ನು ಜೀವನದಲ್ಲಿ ಅಳವಡಿಸಿಕೊಂಡವರು ಎಂದಿಗೂ ಜೀವನದಲ್ಲಿ ತಪ್ಪು ಹೆಜ್ಜೆ ಇಡುವುದಿಲ್ಲ ಎಂದರು,

ಪ್ರಭು ನೇಸೂರ ಮಾತನಾಡಿದರು.

ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಪುಂಡಲಿಕಪ್ಪಾ ಪೂಜಾರಿ, ಅಣ್ಣಪ್ಪಗೌಡ ಪಾಟೀಲ, ರಾಚಯ್ಯಾ ಮಠಪತಿ, ನಿಂಗಣ್ಣ ಪೂಜಾರಿ, ಪ್ರಭು ಮುಧೋಳ, ಮನೋಜ ಹಟ್ಟಿ, ಪ್ರಕಾಶ ಪೂಜೇರಿ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದಾರ ಗ್ರಾಮದ ಪ್ರಮುಖರು, ಮಹಿಳೆಯರು ಸೇ–ರಿದಂತೆ ಸಾವಿರಾರು ಜನ ಭಕ್ತಾಧಿಗಳು ಆಗಮಿಸಿದ್ದರು.

ಇದೇ ವೇಳೆ ಅರಣ್ಯ ಅಧಿಕಾರಿ ವಾಸುದೇವ ಇಗವೆ ದಂಪತಿಗಳು ವಿಶೇಷ ತಳಿಯ ಸಸಿ ನೀಡುವ ಮೂಲಕ ಶ್ರೀಗಳನ್ನು ಸತ್ಕರಿಸಿ ಗೌರವಿಸಿದರು.

ಶಿವಪ್ಪಾ ಉರಭಿನವರ ಕುಟುಂಬಸ್ಥರಿಂದ ಹಮ್ಮಿಕೊಳ್ಳಲಾಗಿದ್ದ ದಾಸೋಹ ಮಹಾಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಮಂಗಲಗೊಂಡಿತು.

## ರೇವತಗಾಂವದಲ್ಲಿ ಎಳ್ಳ ಅಮವಾಸ್ಯ ಚರಗ ಚೆಲ್ಲುವ ಸಂಭ್ರಮ

# ಕೃಷಿಕರು ಭೂತಾಯಿಗೆ ಅರ್ಪಿಸುವ ನೈವೇದ್ಯವೇ ಚರಗ

**ಉದಯರಶ್ಮಿ ನ್ಯೂಸ್**



ಚಡಚಣ: ಉತ್ತರ ಕರ್ನಾಟಕದ ರೈತರ ಪಾಲಿಗೆ ಸಂಭ್ರಮದ ಹಬ್ಬ. ಎಳ್ಳ ಅಮವಾಸ್ಯೆಯ ನಿಮಿತ್ತ ರೇವತಗಾಂವ ಗ್ರಾಮದ ಕೆಂಬತ್ತಿ ವಸ್ತಿಯಲ್ಲಿನ ರೈತ ಮಹಿಳೆಯರು ಗುರುವಾರದಂದು ಭೂತಾಯಿಗೆ ವಿಶೇಷವಾದ ಪೂಜೆಯನ್ನು ಸಲ್ಲಿಸಿ, ಮುತ್ತೈದೆಯರಿಗೆ ಉಡಿ ತುಂಬುವ ಮೂಲಕ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಬೆಳೆದು ನಿಂತಿರೋ ಜೋಳ, ಕಡಲೆ ಸೇರಿದಂತೆ ಹಿಂಗಾರು ಬೆಳೆಯಲ್ಲಿ ಐದು ಕಲ್ಲಿನ ಪಾಂಡವರನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ 'ಸಜ್ಜೆ ರೊಟ್ಟಿ ಚವಳಿಕಾಯಿ ಚಾಂಗಬಲೋ' ಎಂದು ಹೇಳುತ್ತ ಭೂತಾಯಿಗೆ ಚರಗ ಚೆಲ್ಲಿದರು. ಗ್ರಾಮದ ಪ್ರತಿ ಮಹಿಳೆಯರು ತಮ್ಮ ಮನೆಗಳಲ್ಲಿ ತಯಾರಿಸಿದ ಸಜ್ಜೆ ಕಡಬು, ಹೋಳಿಗೆ, ಹಸಿ ಮೆಣಸಿನಕಾಯಿ ಚೆಟ್ನಿ, ಭರ್ತ, ವಿವಿಧ ಬಗೆಯ ಪಲ್ಯ ಸೇರಿದಂತೆ ಇತರ ವಿಶೇಷ ಭೋಜನವನ್ನು ಭೂತಾಯಿಗೆ ಅರ್ಪಿಸಿದರು.

ಚರಗ ಚೆಲ್ಲುವ ಸಂಭ್ರಮ ಮುಗಿದ ನಂತರ ತುಂಬಿದ ಹೊಲದ ಮಧ್ಯ ಮುತ್ತೈದೆಯರ ಊಟವಾದ ಮೇಲೆ ಎಲ್ಲರೂ ಸಹ ಭೋಜನವನ್ನು ಸವಿದರು. ಸ್ವಲ್ಪ ಹೊತ್ತು ಹೊಲದಲ್ಲಿ ವಿಶ್ರಾಂತಿ ಕಳೆದು ಸಂಜೆ ವೇಳೆಗೆ ಮನೆಗೆ ಮರುಳಿದರು.

ರೇವತಗಾಂವ ಗ್ರಾಪಂ ಸದಸ್ಯೆ ಲಕ್ಷ್ಮೀಬಾಯಿ ಮಾಳಿಯವರು ಮಾತನಾಡುತ್ತ, 'ನಾಲ್ಕು ದಿಕ್ಕುಗಳಿಗೂ ಚರಗ ಚೆಲ್ಲುವುದು ಸಮೃದ್ಧ ಫಸಲು ಬೆಳೆಯಲಿ, ಬೆಳೆಗೆ ಯಾವುದೇ ರೋಗ ತಗುಲದೆ ಒಳ್ಳೆಯ ಇಳುವರಿ ಬರಲಿ ಎಂಬ ಆಶಯದೊಂದಿಗೆ ಕೃಷಿಕರು ಭೂಮಿತಾಯಿಗೆ ಅರ್ಪಿಸುವ ನೈವೇದ್ಯವೇ ಚರಗವಾಗಿದೆ' ಎಂದು ಹೇಳಿದರು.

ಈ ವೇಳೆಯಲ್ಲಿ ಸುಜಾತಾ ಮಾಳಿ, ಪ್ರಭಾವತಿ ಮಾಳಿ, ಸಾವಿತಾ ಮಾಳಿ, ಉಜ್ವಲಾ ಜಂಗಲಗಿ, ಮಹಾನಂದಾ ಮಾಳಿ, ಮಂಜುಳಾ ಮಾಳಿ, ಪ್ರತಿಭಾ ಮಾಳಿ, ಸಿಂಚನಾ ಮಾಳಿ, ತೇಜಶ್ವಿನಿ ಮಾಳಿ, ಸ್ವಪ್ನಾ ಮಾಳಿ, ಜ್ಯೋತಿ ಮಾಳಿ, ಸ್ವಾತಿ ಮಾಳಿ ದೀಪಾ ಮಾಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹೊನವಾಡ ಗ್ರಾಮದಲ್ಲಿ ರೈತರಿಂದ ಚರಗ ಚೆಲ್ಲಿಕೆ



**ಉದಯರಶ್ಮಿ ನ್ಯೂಸ್**

ತಿಕೋಟಾ: ತಾಲ್ಲೂಕಿನ ಹೊನವಾಡ ಗ್ರಾಮದಲ್ಲಿ ರೈತರು ಚರಗ ಚೆಲ್ಲುವ ಮೂಲಕ ಎಳ್ಳು ಅಮಾವಾಸ್ಯ ಆಚರಿಸಿದರು.

ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಎಳ್ಳು ಅಮವಾಸ್ಯೆ ದಿನ ರೈತರು, ರೈತ ಮಹಿಳೆಯರು ಮಕ್ಕಳು ಸೇರಿದಂತೆ ಮನೆ ಮಂದಿ ಚಕ್ಕಡಿ, ಟ್ರ್ಯಾಕ್ಟರ್ ನಲ್ಲಿ ಬುತ್ತಿ ಕಟ್ಟಿಕೊಂಡು ಹೊಲಕ್ಕೆ ಹೋಗುತ್ತಾರೆ.

ಎಳ್ಳು ಹಚ್ಚಿದ ರೊಟ್ಟಿ, ಎಳ್ಳು ಕಡುಬು, ಕಡಲೆಗಡುಬು, ಬದನೆಕಾಯಿ ಪಲ್ಲೆ, ಚಟ್ನಿಯಂತಹ ವಿವಿಧ ಖಾದ್ಯಗಳನ್ನು ಕಟ್ಟಿಕೊಂಡು ಹೊಲಕ್ಕೆ ಹೋಗಿ, ಬೆಳೆದು ನಿಂತಿರೋ ಜೋಳ, ಕಡಲೆ ಸೇರಿದಂತೆ ಹಿಂಗಾರು ಬೆಳೆಯಲ್ಲಿ ಐದು ಕಲ್ಲಿನ ಪಂಡರು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ 'ಹುಲ್ಲು ಹುಲ್ಲಿಗೋ ಚೆಲ್ಲ ಚೆಲ್ಲಂಬರಿಗೋ' ಎಂದು ಹೇಳುತ್ತಾ ಖಾದ್ಯಗಳನ್ನು ಹೊಲದ ತುಂಬೆಲ್ಲಾ ಚೆಲ್ಲುವುದೇ ಚರಗ. ಮನೆ ಮಂದಿ ಜೊತೆಗೆ ಹೊಲ ಇಲ್ಲದವರನ್ನು ಕರೆದುಕೊಂಡು ಚರಗ ಚೆಲ್ಲಲು ಹೋಗುವುದು ಇನ್ನೊಂದು ವಿಶೇಷ. ಮುತ್ತು ಹಿರೇಮಠ್ ಕುಟುಂಬದವರು ಎಲ್ಲ ಸ್ನೇಹಿತರೊಂದಿಗೆ ಅವರ ಹೊಲದಲ್ಲಿ ಚರಗ ಚೆಲ್ಲಿದ ಬಳಿಕ ಹೊಲದಲ್ಲಿ ಎಲ್ಲರೂ ಸೇರಿ ಸಹಭೋಜನ ಮಾಡಿಸಿದರು.

# ಚೆಡ್ಡಿ ಗ್ಯಾಂಗ್: ಎಚ್ಚರಿಕೆಯಿಂದಿರಲು ಮನವಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣ ಹಾಗೂ ಹಳ್ಳಿಗಳಲ್ಲಿ ಮನೆಕಳ್ಳತನ ಮಾಡಲು ಅಂತರಾಜ್ಯದಿಂದ ಚೆಡ್ಡಿ ಗ್ಯಾಂಗ ಬಂದಿದ್ದು, ಸದರಿ ಗ್ಯಾಂಗ ಸಕ್ರೀಯವಾಗಿರುತ್ತದೆ. ಸದರಿ ಗ್ಯಾಂಗನಲ್ಲಿ ಸುಮಾರು ನಾಲ್ಕೈದು ಜನರು ಇದ್ದಾರೆ. ಇವರು ರಾತ್ರಿ ವೇಳೆ ತಮ್ಮ ಮೈ ಮೇಲೆ ಕೇವಲ ಚಡ್ಡಿ, ಬನಿಯನ್, ಮಂಕಿಕ್ಯಾಪ ಹಾಕಿಕೊಂಡು ಮನೆ ಕಳ್ಳತನ ಮಾಡಲು ತಿರುಗಾಡುತ್ತಿದ್ದು, ಇಂತಹ ಜನರು ತಮ್ಮ ಬಡಾವಣೆ ಹಾಗೂ ಹಳ್ಳಿಗಳಲ್ಲಿ ಕಂಡು ಬಂದಲ್ಲಿ ಸಾರ್ವಜನಿಕರು ಭಯಭೀತರಾಗದೇ ಕೂಡಲೇ ಪೊಲೀಸ ಠಾಣೆ ಮತ್ತು ಪೊಲೀಸ ಕಂಟ್ರೋಲ್ ರೂಮ್ ಅಥವಾ 112ಗೆ ಕರೆ ಮಾಡಿ ಮಾಹಿತಿ ನೀಡಬೇಕೆಂದು ಪತ್ರಿಕಾ ಪ್ರಕಟಣೆಯ ಮೂಲಕ ಸಿಪಿಐ ಡಿ. ಹುಲುಗಪ್ಪ ಮತ್ತು ಪಿಎ[illegible] ಭೀಮಪ್ಪ ರಬಕವಿ ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಸೂಚನೆ

ಸಾರ್ವಜನಿಕರು ಊರಿಗೆ ಹೋಗಬೇಕಾದ ಸಂದರ್ಭ ಬಂದಲ್ಲಿ ತಮ್ಮ ಮನೆಯಲ್ಲಿ ಬೆಲೆಬಾಳುವ ಆಭರಣಗಳು ಮತ್ತು ಹಣ ಇಟ್ಟು ಹೋಗಬಾರದು. ಮತ್ತು ಹೋಗುವ ಮುಂಚೆ ಸಿಂದಗಿ ಪೊಲೀಸ ಠಾಣೆಗೆ ಮಾಹಿತಿ ನೀಡಲು ಸಿಪಿಐ ಡಿ. ಹುಲುಗಪ್ಪ ತಿಳಿಸಿದ್ದಾರೆ.

# ಮನೆಗಳ್ಳರ ಗ್ಯಾಂಗ್ :ಪೋಲೀಸ್ ಪ್ರಕಟಣೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ವಿಜಯಪುರ ಜಿಲ್ಲೆಯಲ್ಲಿ ಇತ್ತೀಚೆಗೆ ಮನೆ ಕಳ್ಳತನ ಮಾಡುವ ಚಡ್ಡಿ ಗ್ಯಾಂಗ್ ಕಾಣಿಸಿಕೊಂಡಿದ್ದು ಈ ಗ್ಯಾಂಗ್ ನಲ್ಲಿ 4 ರಿಂದ 5 ಜನ ಇದ್ದಾರೆ.

ಚಡ್ಡಿ, ಬನಿಯನ್ ಮತ್ತು ಮಂಕಿ ಕ್ಯಾಪ್ ಹಾಕಿಕೊಂಡು ತಿರುಗಾಡುತ್ತಿರುತ್ತಾರೆ. ಯಾರಾದರೂ ಇಂತಹ ಅಪರಿಚಿತರು ಕಂಡು ಬಂದಲ್ಲಿ ಯಾರೂ ಭಯಪಡದೇ, ಕೂಡಲೇ ಪೊಲೀಸ್ ಠಾಣೆಗೆ ತಿಳಿಸಲು ಪೊಲೀಸ್ ಪ್ರಕಟಣೆ ತಿಳಿಸಿದೆ.

# ಜೂಜು–ಹೀಗೆ ಒಂದು ವಿಚಾರ



## ಭಾವರಶ್ಮಿ

– ಶಾರದಾ ಪ್ರಸಾದ
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

"ಜೂಜು" ಶ್ರೀಮಂತನಿಂದ ಹಿಡಿದು ಬಡವನ ತನಕ ಯಾವುದೇ ಜಾತಿ ಧರ್ಮ ಭೇದವಿಲ್ಲದೆ ಯಾರನ್ನು ಬೇಕಾದರೂ ಆವರಿಸಿಕೊಳ್ಳುವ ಮಾಯೆ..ಈ ಮಾಯೆಯಲ್ಲಿ ಸಿಲುಕಿದವರಿಗೆ ಯಾರ ಪರಿವೆಯೂ ಇರದು..

ಹಿಂದೆ ಜೂಜಾಡಿ ರಾಜ್ಯ, ದೇಶ ,ಕೋಶಗಳನ್ನು ಜೊತೆಗೆ ಹೆಂಡತಿ ಮಕ್ಕಳನ್ನೂ ಕಳೆದುಕೊಂಡ ಉದಾಹರಣೆಗಳು ಸಾಕಷ್ಟು ಇವೆಯಾದರೂ ಅದರಿಂದ ಬುದ್ಧಿ ಕಲಿವ ಮನಸ್ಸು ದಡ್ಡ ಜನಗಳಿಗೆ ಬರುವುದಿಲ್ಲ.

ಶ್ರೀಮಂತ ಲಕ್ಷ ,ಕೋಟಿಗಳಲ್ಲಿ ಜೂಜಾಡಿ ಕಳೆದರೆ ಬಡವ ಇರುವ ನಾಲ್ಕು ಕಾಸನ್ನೇ ಕಳೆಯುತ್ತಾನೆ. ಇದ್ದ ಹಣ ಕಳೆದುಕೊಂಡ ಮೇಲಾದರೂ ಬುದ್ಧಿ ಬರಬಹುದೆಂಬ ಆಸೆ ಇದ್ದರೆ ಅದು ನಮ್ಮ ಮೂರ್ಖತನ ಅಷ್ಟೆ..



ಜೂಜಲ್ಲಿ ಗಳಿಸಿದವನು ಮತ್ತಷ್ಟು ಗಳಿಸುವ ಹುಮ್ಮಸ್ಸಿನಲ್ಲಿ ಕೈ ಖಾಲಿ ಮಾಡಿಕೊಂಡರೆ, ಸೋತವನು ಕಳೆದದ್ದನ್ನು ಮರುಗಳಿಸುವ ಸಲುವಾಗಿ ಸಾಲ ಮಾಡಿಯಾದರೂ ಆಡುತ್ತಾನೆ.

ಜೂಜಿಗೆ ಸಿಲುಕಿದವರು" ಸಿಂಬಳಕ್ಕೆ ಸಿಕ್ಕ ನೊಣದಂತೆ " ಹೊರಬರಲಾರದೆ ಚಡಪಡಿಸುವುದೇ ಬಹುತೇಕ ಸತ್ಯ.. ಎಲ್ಲೋ ಕೆಲವರಿಗೆ ಜ್ಞಾನೋದಯವಾಗಿ ಹೊರಬಂದು ನೆಮ್ಮದಿಯ ಜೀವನ ನಡೆಸುತ್ತಾರೆ..

ಕೆಲವು ಕುಟುಂಬಗಳಲ್ಲಿ ಇದೇ ಕಾರಣಕ್ಕೆ ಜಗಳ ಹೊಡೆದಾಟಗಳು ನಡೆಯುವುದುಂಟು..

ಹೆಂಡತಿಯ ತಾಳಿಯನ್ನು ಸಹ ಬಿಡದೆ ಕಿತ್ತುಕೊಂಡು ಜೂಜಾಡುವ ಗಂಡಸರ ಸಂಖ್ಯೆ ಕಡಿಮೆಯಿಲ್ಲ..

ಸರ್ಕಾರ ಜೂಜಾಡುವುದು ಕಾನೂನು ಬಾಹಿರ ಅನ್ನೋ ನಿಯಮ ಹಾಕಿದರು ಅದನ್ನು ತಡೆಯುವಲ್ಲಿ ಬಹುತೇಕ ವಿಫಲ. ಈಗಂತು ಕುಳಿತ ಕಡೆ ಕೈಯಲ್ಲಿನ ಮೊಬೈಲ್ ಇಂದಲೇ ಜೂಜಾಡಲು ಯಾರ ಅನುಮತಿ ಬೇಕಿಲ್ಲ ..ಆನ್ ಲೈನ್ ಗ್ಯಾಂಬ್ಲಿಂಗ್ ಆಪ್ ಗಳಿಂದ ಬಹಳಷ್ಟು ಯುವಜನರು ಹಾಳಾಗುತ್ತಿರುವುದು " ಓಪನ್ ಸೀಕ್ರೇಟ್ " .

ಹಿಂದೆ ಹೆಂಡತಿಯರು ತಮ್ಮ ಗಂಡ ಕೆಟ್ಟ ಚಟಗಳಿಗೆ ದಾಸನಾಗಿರುವುದು ಕಂಡು ಅತ್ತು ಕರೆದು ,ಬುದ್ಧಿ ಹೇಳಿ ಸಾಕಾಗಿ ಕೈಚೆಲ್ಲಿ ಅಸಹಾಯಕರಾಗಿ ನೋವು ಅನುಭಸುತ್ತಿದ್ದರು..ಈಗ ಕಾಲ ಹೇಗೆ ಬದಲಾಗಿದೆ ಅಂದರೆ ಕೆಲವು ಹುಡುಗಿಯರು ಗಂಡ " ಸ್ಮೋಕ್ ಮಾಡಲ್ಲ ,ಪಾರ್ಟಿ ಅಟೆಂಡ್ ಮಾಡಲ್ಲ ,ಕಾರ್ಡ್ಸ್ ಆಡಕ್ಕೆ ಬರಲ್ಲ " ಎನ್ನುವ ಕಾರಣಕ್ಕೆ ಡಿವೋರ್ಸ್ ಎನ್ನುವುದು ನಮ್ಮ ಸಮಾಜದ ನೈತಿಕತೆ ಎಲ್ಲಿಗೆ ಬಂದು ನಿಂತಿದೆ ಎನ್ನುವುದರ ಮೇಲೆ ಬೆಳಕು ಚೆಲ್ಲಿದಂತೆ...



ಜೂಜಾಡುವುದು ಬರೀ ಗಂಡಸ–ರಿಗಷ್ಟೇ ಸೀಮಿತವಲ್ಲ . ನಾನು ಚಿಕ್ಕವಳಿದ್ದಾಗ ಅಜ್ಜಿಯೊಬ್ಬರು ಬೆಳಗಿನಿಂದ ಸಂಜೆಯ ತನಕ ಇಸ್ಪೀಟ್ ಆಟವನ್ನು ದುಡ್ಡು ಕಟ್ಟಿ ಆಡುವುದನ್ನು



ನೋಡುತ್ತಿದ್ದೆ . ಆಮೇಲೆ ಕಾಲ ಬದಲಾದಂತೆ ಕ್ಲಬ್ ಗಳಲ್ಲಿ ಸೇರಿ ಆಡುತ್ತಿದ್ದವರೂ ಕಡಿಮೆ ಇರಲಿಲ್ಲ.

ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಇದರಲ್ಲೂ ಸಮಾನತೆಗಾಗಿ ಪೈಪೋಟಿ ನಡೆಸುವುದು ಎಷ್ಟರ ಮಟ್ಟಿಗೆ ಸರಿಯೋ ಗೊತ್ತಿಲ್ಲ. ನಾನು ನನ್ನ ಹತ್ತಿರದ ಕೆಲವು ವ್ಯಕ್ತಿಗಳು ಜೂಜಿನ ಬಲೆಯಲ್ಲಿ ಸಿಲುಕಿ ಜೀವನ ಹಾಳು ಮಾಡಿಕೊಂಡಿರುವುದು, ಮತ್ತೆ ಒಂದಿಬ್ಬರು ಅದರಿಂದ ಹೊರಬಂದು ಚಂದದ ಜೀವನ ನಡೆಸಿದ್ದು ಕಣ್ಣಾರೆ ಕಂಡು ನನ್ನ ಅನುಭವಕ್ಕೆ ಬಂದಿರುವ ವಿಚಾರ .

" ಸಹವಾಸದಿಂದ ಸಂನ್ಯಾಸಿ ಕೆಟ್ಟ" ಅನ್ನೋ ಗಾದೆ ಸರ್ವ ಕಾಲಕ್ಕೂ ಸೂಕ್ತ . ಗೆಳೆತನ ಮಾಡುವಾಗ ಆದಷ್ಟೂ ಸಂಭಾವಿತ, ಸನ್ನಡತೆ ಇರುವವರ ಜೊತೆ ಮಾಡಬೇಕು ..ಮನಸ್ಸು ಕೋತಿ ತರ ಎಲ್ಲಾ ಕಡೆ ನುಗ್ಗಿ ಬಿಡತ್ತೆ ಅದಕ್ಕೆ ಸ್ವಲ್ಪ ಕಡಿವಾಣ ಹಾಕಿ ಒಳ್ಳೆಯ ದಾರಿಗೆ ತರಬೇಕಾದ್ದು ನಮ್ಮದೇ ಹೊಣೆ.

ಜೂಜಾಟ ಸಾಮಾಜಿಕ ಪಿಡುಗು ಆದಷ್ಟೂ ಇದರಿಂದ ಎಲ್ಲರೂ ದೂರವಿರಬೇಕು.

## ಕಾವ್ಯರಶ್ಮಿ



– ಭಾರತಿ ಹೆಗಡೆ
("ನಮ್ಮ ಕಥಾ ಅರಮನೆ" ಬರಹಗಾರರು)

### ನೀನಿರಲು ಜೊತೆಯಲಿ



ನೀನಿರೆ ಜೊತೆಯಲ್ಲಿ ನಲ್ಲೆ ಎಲ್ಲುಂಟೆ ಬಾಳಿಗೆ ಎಲ್ಲೇ
ನಿನ್ನಿಂದ ಎಲ್ಲವೂ ನಲ್ಲೆ ನೀನಿರದೇ ಬದುಕಲೇ ನಿಲ್ಲೇ

ನೀನೊಂದು ಅಂದದ ಹೆಣ್ಣು ನನ್ನ ಬಾಳಿಗೆ ನೀನೇ ಕಣ್ಣು
ನೀನಿರೆ ಜೊತೆಯಲಿ ನನ್ನ ಜೀವಕ್ಕೆ ಅದುವೇ ಹೊನ್ನು

ನೀ ನನ್ನ ಬಾಳಿಗೆ ದೀಪ ನನ್ನಯ ಮನೆಯ ನಂದಾದೀಪ
ನಿನ್ನಿಂದಲೇ ನನ್ನಯ ಕೀರ್ತಿ ನೀ ನನ್ನ ಬದುಕಿಗೆ ಸ್ಫೂರ್ತಿ

ಮಕ್ಕಳ ಓದಿನ ಪ್ರತಿಕ್ಷಣ ನಿನ್ನಯ ಶ್ರಮವೋ ಅನುದಿನ
ಮನೆಯಲ್ಲಿ ನೀ ಅನುದಿನ ಮನದಲಿ ಸಂತಸ ಅನುಕ್ಷಣ.

ನಕ್ಕರೆ ನಿನ್ನ ಯೌವ್ವನ ಮಧು ತುಂಬಿದ ಹೂಬನ
ಮನೆಯಲ್ಲಿ ನೀನಿರೆ ಅನುದಿನ ನಲಿವುದೆನ್ನ ಮೈಮನ.